
ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 8, ಕೊಯಿಲು 2, ಮೇ - ಆಗಸ್ಟ್, 2002

ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಹನಿ ನೀರಿಗಾಗಿ ....



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಕಾವೇರಿ ಕಲಹ:

ಕರ್ನಾಟಕ ತಮಿಳುನಾಡು ರಾಜ್ಯಗಳು ಕಾವೇರಿ ಜಲವಿವಾದದಲ್ಲಿ ಕೈಕೈ ಮಿಲಾಯಿಸಿಕೊಳ್ಳುತ್ತಿವೆ. ಎರಡೂ ರಾಜ್ಯಗಳು, ಮಳೆಯಿಲ್ಲದೆ ಬರದಲ್ಲಿ ಸಿಲುಕಿರುವಾಗ ಹನಿ ನೀರಿಗಾಗಿ ಈ ರೀತಿ ಹೊಡೆದಾಟ ಮಾಡುವುದು ಸರಿಯೆ? ಇದು ಅತಿ ನೀರು ಬೇಡುವ ಭತ್ತ, ಕಬ್ಬಿನಂತಹ ಬೆಳೆಗಳನ್ನು ಪೋಷಿಸುವ ಬೃಹತ್ ನೀರಾವರಿ ಯೋಜನೆಗಳು ಸುಸ್ಥಿರವಲ್ಲ ಎಂಬುದರ ಜೊತೆಗೆ ಸಾಮಾಜಿಕವಾಗಿ ಹಿಂಸೆ, ದ್ವೇಷ ಬಿತ್ತುವಂತಹವು ಎಂಬುದನ್ನು ಎತ್ತಿ ತೋರಿಸುತ್ತಿದೆ. ಕೀಳು ರಾಜಕೀಯದಾಟಕ್ಕೆ ಬಲಿಯಾಗುವ ಮುನ್ನ ಕಾವೇರಿ ಕಣಿವೆಯ ಎರಡೂ ರಾಜ್ಯದ ರೈತರು ಒಂದೆಡೆ ಸೇರಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಒಂದು ಸೂಕ್ತ ಪರಿಹಾರ ಕಂಡುಕೊಳ್ಳುವತ್ತ ಪ್ರಯತ್ನವನ್ನಾದರೂ ಮಾಡಬಹುದಲ್ಲವೆ?

ಸಮಾನ ಪ್ರತಿಫಲ ನಿಯಮವೊಂದೇ ಪರಿಹಾರ: ಅಭಿವೃದ್ಧಿ ದೃಷ್ಟಿಯಿಂದ ಹೊಳೆ ನೀರು ಒಂದು ಅತ್ಯಂತ ಮಹತ್ವದ ನೈಸರ್ಗಿಕ ಸಂಪನ್ಮೂಲ. ಇದರ ಯೋಗ್ಯ ರೀತಿಯ ಬಳಕೆಯ ವಿಚಾರದ ಮೇಲೆ ಪರಿಸರ ಮತ್ತು ಸಂಪನ್ಮೂಲ ಅರ್ಥಶಾಸ್ತ್ರ ಹೆಚ್ಚು ಬೆಳಕು ಚೆಲ್ಲಬಲ್ಲದ್ದಾಗಿದೆ. ಇಲ್ಲಿ ಅನ್ವಯಿಸಬಹುದಾಗಿರುವ ಒಂದು ಸರಳ ಸೂತ್ರವೆಂದರೆ ಮಿತವಾಗಿರುವ ಪ್ರತಿ ಹನಿ ಹನಿ ನೀರನ್ನೂ ಬಳಕೆ ಮಾಡುವುದರಿಂದ ಎಲ್ಲಿ ಅಧಿಕ ಪ್ರತಿಫಲ ದೊರೆಯುವುದೋ ಅಲ್ಲಿ ಮಾತ್ರ ಉಪಯೋಗಿಸಬೇಕೆನ್ನುವುದು. ಇಂತಹ ಹಲವಾರು ಉಪಯೋಗದ ದಾರಿಗಳಿದ್ದರೆ, ಅವುಗಳೆಲ್ಲವುದರಿಂದಲೂ ಬರುವ ಅಧಿಕ ಪ್ರತಿಫಲ (Marginal Return) ಹೆಚ್ಚು ಕಡಿಮೆ ಸಮವಾಗುವವರೆಗೆ ಅದನ್ನು ಜಾಗರೂಕತೆಯಿಂದ ಹಂಚಬೇಕಾಗುತ್ತದೆ. ಉದಾಹರಣೆಗೆ ಒಬ್ಬ ರೈತನ ಹೊಲದಲ್ಲಿರುವ ಬಾವಿಯ ನೀರು ಬತ್ತುತ್ತಾ ಬಂದ ಹಾಗೆ, ಇರುವ ಮಿತವಾದ ನೀರನ್ನು ಕುಡಿಯಲೆಷ್ಟು ಬಳಸಬೇಕು, ಜಾನುವಾರುಗಳಿಗೆಷ್ಟು ಬಿಡಬೇಕು, ರಾಗಿಗೆಷ್ಟು, ಬತ್ತಕ್ಕೆಷ್ಟು, ತರಕಾರಿ ಇತರ ವಾಣಿಜ್ಯ ಬೆಳೆಗಳಿಗೆಷ್ಟು ಎಂಬ ಹಂಚಿಕೆಯ ವಿಚಾರವನ್ನು ಅಗತ್ಯ, ತೃಪ್ತಿ, ಬರುವ ಅಧಿಕ ಆದಾಯ, ಇತ್ಯಾದಿ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಬಗೆಹರಿಸಿಕೊಳ್ಳುವುದು. ಇದಕ್ಕೆ ಸಮಾನ ಪ್ರತಿಫಲ ನಿಯಮ (Law of Equimarginal Return) ಎಂದು ಅರ್ಥಶಾಸ್ತ್ರದಲ್ಲಿ ಕರೆಯಲಾಗುತ್ತದೆ. ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲೂ ಇರುವ ಮಿತವಾದ ನೀರನ್ನು ಯಾವ ಬೆಳೆಗಳಿಗೆ, ಯಾವ ಉದ್ದೇಶಗಳಿಗೆ ಎಲ್ಲಿ ಯಾವಾಗ ಹಂಚಿದರೆ, ಅದರಿಂದ ಒಟ್ಟಾರೆ ತೃಪ್ತಿ, ಪ್ರತಿಫಲ ಅಧಿಕವಾಗುತ್ತದೆ ಎಂದು ಯೋಚಿಸಬಹುದಲ್ಲವೆ? ಮತ್ತು ಇದು ಇಡೀ ದೇಶದ ಹಿತದೃಷ್ಟಿಯಿಂದ ಯೋಗ್ಯವಲ್ಲವೇ?

ಮಲೆನಾಡ ನಳಪಾಕ:

ಮಲೆನಾಡಿನ ಕಾಡುಗಳಲ್ಲಿ ಮಾತ್ರ ದೊರಕುವ ಕಳಲೆ, ಕಾಕಿಸೊಪ್ಪು, ಕಾಡು ಕೊತ್ತಂಬರಿ, ಚಗ್ತೆಸೊಪ್ಪು, ಧೀರ್ಕ ಮತ್ತಿತರ ವನ್ಯಸಸ್ಯ ಉತ್ಪನ್ನಗಳ ಅಡಿಗೆಯ ಬಗ್ಗೆ ವಿವರಗಳನ್ನು ತೀರ್ಥ ಹಳ್ಳಿಯ ಶ್ರೀಮತಿ ಗಾಯತ್ರಿ ದಿನೇಶ್ ಕಲೆ, ಹಾಕಿರುವರು. ಈ ಅಡಿಗೆಗಳಲ್ಲಿ ಆಹಾರ, ಪೌಷ್ಠಿಕದಾಯಕತೆಯನ್ನೂ ಮೀರಿ ಆರೋಗ್ಯ, ರುಚಿತನ, ಹಾಳಾಗದೇ ಬಹು ಸಮಯ ಶೇಖರಿಸಿಡುವ ಗುಣ, ಎಲ್ಲರಿಗೂ ಕೈಗೆಟುಕುವ ಸಾಧ್ಯತೆ ಮಿಗಿಲಾಗಿ ಸಾಂಸ್ಕೃತಿಕ ವಿಚಾರಗಳೂ ಅಡಕವಾಗಿರುವುದನ್ನು ಕಾಣಬಹುದು. ಇದು ಜೀವ ವಿವಿಧತೆ ಮೇಲೆ ನಿಂತಿರುವ

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), Ahmedabad

ನಮ್ಮ ದೇಶೀಯ ಆಹಾರ ಪದ್ಧತಿ. ಧೀರ್ಘದಂತಹಾ ಉತ್ಪನ್ನಗಳಂತೂ ಮಲೆನಾಡ ಒಕ್ಕಲಿಗರ ಊಟದ ಒಂದು ಅವಿಭಾಜ್ಯ ಅಂಗವೇ ಆಗಿದೆ. ಇವುಗಳು ನಮ್ಮ ನಾಳಿನ ಆಹಾರವಾಗುವುದರಲ್ಲಿ ಸಂಶಯವಿರದು. ಕಾಡು, ಪರಿಸರ ನಾಶವಾದಲ್ಲಿ ಇದಕ್ಕೂ ಏಟು ಬೀಳುವುದು ಖಚಿತ. ಇದಾಗುವ ಮೊದಲೇ ಎಚ್ಚೆತ್ತುಕೊಂಡು ಈ ಸಸ್ಯ ವೈವಿಧ್ಯವನ್ನು ಹಾಗೇ ಇದನ್ನು ಉಪಯೋಗಿಸುವ ನಾಟೀ ಅಡಿಗೆ ಪದ್ಧತಿಗಳನ್ನು ಸಂರಕ್ಷಿಸುವತ್ತ ನಾವಿಂದು ಅವಶ್ಯಕವಾಗಿ ಪ್ರಯತ್ನಿಸಬೇಕಾಗಿದೆ.

ಪೂರ್ವ ಸೂಚಿತ ಸಮ್ಮತಿ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಸ್ಪರ್ಧೆಗಳ ಮೂಲಕ ದೇಶೀಯ ತಂತ್ರಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳನ್ನು ಹುಡುಕಿ ದಾಖಲು ಮಾಡುವುದು ಮತ್ತು ಕೆಲವರಿಗೆ ಬಹುಮಾನ ಕೊಟ್ಟರೆ ಸಾಲದು. ಇವುಗಳು ಮತ್ತಷ್ಟು ವ್ಯವಸ್ಥಿತ ರೂಪದಲ್ಲಿ ದೇಶದ ಮೂಲೆ ಮೂಲೆಗೂ ವರ್ಗಾವಣೆಯಾಗಬೇಕು. ಇದಕ್ಕೆ ಸಂಸ್ಥೆಗಳ ನೆರವು ಬೇಕಾಗಿದೆ. ಇದಕ್ಕಾಗಿ ದೇಶದ ಮೂಲೆ ಮೂಲೆಗಳಲ್ಲಿ ಗ್ಯಾನ್ - ತಳಮಟ್ಟದ ಅನುಶೋಧನೆಗಳ ಅಭಿವೃದ್ಧಿ ಜಾಲ (GIAN - Grassroots Innovations Augmentation Network) ಸ್ಥಾಪನೆ ಮಾಡಲು ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ ಉದ್ದೇಶಿಸಿದೆ. ಇವೆಲ್ಲಾ ಕಾರ್ಯ ಸಾಧಿಸುವಾಗ ಅನುಶೋಧನೆ ಮತ್ತು ದೇಶೀಯ ಜ್ಞಾನವನ್ನು ಸೃಷ್ಟಿಸಿ ಪ್ರತಿಷ್ಠಾನಕ್ಕೆ ಕಳುಹಿಸಿದ ವ್ಯಕ್ತಿ/ಗುಂಪು ಮತ್ತು ಸಮುದಾಯಗಳ ಅಭಿಪ್ರಾಯ ಪಡೆಯಲು ಒಂದು 'ಪೂರ್ವಸೂಚಿತ ಸಮ್ಮತಿ' (Prior Informed Consent) ಎಂಬ ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಲಾಗಿದ್ದು ಪುಟ 12ರಲ್ಲಿ ಮುದ್ರಿಸಲಾಗಿದೆ. ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳನ್ನು ದಾಖಲು ಮಾಡುವುದರಿಂದ ಅದನ್ನು ಕೊಳ್ಳೆ ಹೊಡೆಯುವವರಿಗೆ ಮತ್ತಷ್ಟು ಅನುವು ಮಾಡಿಕೊಟ್ಟಂತಾಗುತ್ತದೆ ಎಂಬ ಒಂದು ಗಂಭೀರ ಅಪವಾದ ಮೂಡಿ ಬರುತ್ತಿದೆ. ಇದಕ್ಕೆ ಉತ್ತರ ಪಡೆಯಲು ಒಂದು ಸಮಗ್ರ ದೃಷ್ಟಿಕೋನದ ಪರ್ಯಾಯ ಭೌದ್ಧಿಕ ಸನ್ನದ್ಧಿನ ಹಕ್ಕು ಅಗತ್ಯವಾಗಿದೆ. ಅದಾಗುವವರೆಗೆ, ಕನಿಷ್ಠ ದೇಶೀಯ ತಂತ್ರಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳ ನೈಜ ವಾರಸುದಾರರಿಂದ ಅವುಗಳ ಬಳಕೆಯ ವಿಚಾರದಲ್ಲಿ ಸ್ಪಷ್ಟ ಅಭಿಪ್ರಾಯ ಪಡೆಯುವುದು ಸೂಕ್ತ ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಈ ಸಮ್ಮತಿ ಪತ್ರವನ್ನು ತಯಾರುಮಾಡಲಾಗಿದೆ. ಈ ವಿಚಾರದ ಬಗ್ಗೆ ತಮ್ಮೆಲ್ಲರ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ.

ಡಾ. ಟಿ.ಎಸ್. ಪ್ರಕಾಶ್ ಕಮ್ಮರಡಿ

ಬತ್ತಿಹೋದ ಪ್ರಾಣ ಜಲ - ಪಕ್ಷಿ ಜೀವಿಗಳ ಸಾಮೂಹಿಕ ಆತ್ಮಹತ್ಯೆ

ಜೀವಿಯೊಂದರ ಉಳಿವಿಗೆ ಅನಿವಾರ್ಯವು ಅಗತ್ಯವೂ ಆಗಿರುವ ನೀರಿಗಾಗಿ ಮನುಷ್ಯ ಮನುಷ್ಯರ ನಡುವೆ ಮನಸ್ತಾಪ, ಜಗಳಗಳ ಗೋಡೆಗಳೇಳುತ್ತಿವೆ. ಈ ಸೆಣಸಾಟದಲ್ಲಿ ಮನುಷ್ಯರಷ್ಟೆ ಪಾತ್ರಧಾರಿಗಳಲ್ಲ; ಪ್ರಾಣಿ, ಪಕ್ಷಿಗಳೂ ಇದರಲ್ಲಿ ಒಳಗೊಂಡಿವೆ.

ಇತ್ತೀಚೆಗೆ ಗುಜರಾತ್ ರಾಜ್ಯದ, ಕಚ್ ಜಿಲ್ಲೆಯ ಆಡೆಸರ್ ಹಳ್ಳಿಯಲ್ಲಿ ಸಹಸ್ರಾರು ಪಕ್ಷಿಗಳು ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಂತೆ ಸತ್ತು ಬಿದ್ದವು. ನಾಗರೀಕ ಮನುಷ್ಯನ ವರ್ತನೆಗೆ ಪಿಕ ಸಂಕುಲ ತೋರಿದ ಪ್ರತಿಭಟನೆ ಇದಾಗಿರಬಹುದೆ? ಆಡೆಸರ್ ಹಳ್ಳಿಯ ರೈತರು ಜೀರಿಗೆ ಬೆಳೆದಿದ್ದರು, ಬಾರದ ಮಳೆ ಮತ್ತು ಬಾವಿಯಲ್ಲಿ ನೀರಿನ ಅಭಾವದಿಂದಾಗಿ ಬೆಳೆ ಒಣಗಲಾರಂಭಿಸಿತು. ಈ ಹಳ್ಳಿಯಿಂದ ಎರೆಡು ಕಿಲೋಮೀಟರ್ ದೂರದಲ್ಲಿ ಒಂದು ಸರೋವರವಿದೆ, ಆದರ ದಡದಲ್ಲಿ ಅನೇಕಾನೇಕ ಪಕ್ಷಿಗಳು ಗೂಡು ಕಟ್ಟಿಕೊಂಡು ನೆಲೆಸಿರುವುದರಿಂದ ಅದೊಂದು ಪಕ್ಷಿಧಾಮದಂತಿದೆ. ಜೀರಿಗೆ ಬೆಳೆ ಬೆಳೆದಿದ್ದ ಇಪ್ಪತ್ತು ರೈತರು ತಮ್ಮ ಹೊಲಕ್ಕೆ ಈ ಸರೋವರದಿಂದ ನೀರು ಹಾಯಿಸಲು ನಿರ್ಧರಿಸಿದರು. ಸರೋವರದ ದಡದಲ್ಲಿ ಡೀಸಲ್ ಪಂಪ್ ಕೂರಿಸಿ, ಜೀರಿಗೆ ಬೆಳೆಗೆ ನೀರು ಹರಿಸತೊಡಗಿದರು. ಸರೋವರದ ದಡದ ಪೊದೆಗಳಲ್ಲಿ ನೂರಾರು ಪಕ್ಷಿಗಳು ತಮ್ಮ ಮನೆ ಮಾಡಿಕೊಂಡು, ಆಗಷ್ಟೇ ಮೊಟ್ಟೆ ಇಟ್ಟಿದ್ದವು. ಸರೋವರದಲ್ಲಿ ನೀರಿನ ಮಟ್ಟ ಕಡಿಮೆಯಾದಂತೆ, ಕಂಗೆಟ್ಟ ಹಕ್ಕಿಗಳು ದೂರ ತೀರ ಹುಡುಕಿಕೊಂಡು ಹಾರಿ ಹೋಗತೊಡಗಿದವು. ಕೆಲವು ಇಟ್ಟ ಮೊಟ್ಟೆ ಬಿಟ್ಟು ಹೋಗಲಾರದೆ ಅಲ್ಲೇ ಉಳಿದವು. ಮೊಟ್ಟೆ ಒಡೆದು ಹೊರ ಬಂದ ಎಳೆ ಮರಿಗಳು ಪೋಷಕರಿಲ್ಲದೆ ಅನಾಥವಾದವು. ಆಹಾರಕ್ಕಾಗಿ, ನೀರಿಗಾಗಿ ಚೀತ್ಕರಿಸಿದವು. ಸೊರಗಿ, ಬಳಲಿದ ಮರಿಗಳ ಕಂಠದಿಂದ ಧ್ವನಿ ಹೊರಬರದಂತಾಯಿತು. ನರಳಿ ನರಳಿ ಒಂದು ಹನಿ ನೀರೂ ಸಿಗದೆ, ಬತ್ತಿದ ಸರೋವರದ ದಡದಲ್ಲಿ ಸತ್ತು ಬಿದ್ದವು. ಕೆಲವು ಗೂಡಿನಲ್ಲೇ ಅಸು ನೀಗಿದರೆ, ಇನ್ನು ಕೆಲವು ನೆಲ ಕಚ್ಚಿದವು. ತಾಯಿ ಹಕ್ಕಿಗಳು ತಮ್ಮ ಮಡಿಲಲ್ಲಿ ಸತ್ತ ಮರಿಗಳ ಹೊತ್ತು ತಾವೂ ಪ್ರಾಣ ಬಿಟ್ಟಿದ್ದವು. ರೆಂಬೆ ಕೊಂಬೆಗಳಲ್ಲಿ ನೇತಾಡುತ್ತಿದ್ದ ಸತ್ತ ಪಕ್ಷಿಗಳು, ಸರೋವರದಲ್ಲಿ ಬತ್ತಿ ಹೋದ ಪ್ರಾಣಜಲದ ಪ್ರತಿಬಿಂಬವಾಗಿದ್ದವು. ಈ ಬಗ್ಗೆ ಅಲ್ಲಿನ ರೈತರನ್ನು ಸಂಪರ್ಕಿಸಿದಾಗ ಬಂದ ಪ್ರತಿಕ್ರಿಯೆ ವಿಭಿನ್ನವಾಗಿತ್ತು. ಕೆಲವರಿಗೆ ಈ ಪಕ್ಷಿಗಳ ಬಗ್ಗೆ ಅನುಕಂಪ ಮತ್ತೆ ಕೆಲವರಿಗೆ ಸರೋವರದ ನೀರನ್ನೆಲ್ಲಾ ಹೊಲಕ್ಕೆ ಹಾಯಿಸಿದರೂ ನಿರೀಕ್ಷಿತ ಇಳುವರಿ ಸಿಗದೇ ಇರುವ ಪರಿಸ್ಥಿತಿಯಲ್ಲಿ ಪಕ್ಷಿಗಳ ಪ್ರಾಣದ ಬಗ್ಗೆ ನಾವು ಏಕೆ ಯೋಚಿಸಬೇಕು ಎಂಬ ಪ್ರಶ್ನೆ.

ನಾವು ಯಾವ ಯಾವ ದೃಷ್ಟಿಕೋನಗಳಿಂದ ಈ ಪರಿಸ್ಥಿತಿ ನೋಡಬಲ್ಲೆವು? ಸರೋವರ ಪಕ್ಷಿಧಾಮದ ಪ್ರದೇಶದಲ್ಲಿ ಇದ್ದುದರಿಂದ, ರೈತರು ಅಲ್ಲಿಂದ ನೀರು ತೆಗೆದದ್ದು ಕಾನೂನು ಬಾಹಿರ. ಪಕ್ಷಿಗಳು ಮತ ಚಲಾಯಿಸಲಾರವು, ಆದ್ದರಿಂದ ಅವುಗಳ ಮೂಲಭೂತ ಹಕ್ಕಿನ ಕಡೆ, ಅವಶ್ಯಕತೆಗಳ ಕಡೆ ಯಾರೂ ಗಮನ ಹರಿಸಲಾರರು. ಎಷ್ಟೋ ಪ್ರದೇಶಗಳಲ್ಲಿ ಮನುಷ್ಯರೇ ನೀರಿಲ್ಲದೆ ಸಾಯುತ್ತಿರುವಾಗ ಪಕ್ಷಿಗಳದ್ದೇನು ಮಹಾ ದೊಡ್ಡ ಸಂಗತಿಯೇ? ಅಯ್ಯೋ ಇಷ್ಟೊಂದು ಪಕ್ಷಿಗಳು ಸತ್ತು ಹೋದವಲ್ಲ, ನೀರಿನ ಕೊರತೆಯೇ ಇದಕ್ಕೆ ಕಾರಣ, ನಾವು ಅಸಹಾಯಕರು, ಹೀಗೆ ನಾನಾ ರೀತಿಯಲ್ಲಿ ಈ ಘಟನೆ ಸುತ್ತ ಅಭಿಪ್ರಾಯಗಳ ಬಲೆ ಎಣೆಯಬಹುದು, ಆದರೆ ಪ್ರತಿಯೊಬ್ಬ ಮನುಷ್ಯರಲ್ಲಿರುವ ಮಾನವೀಯತೆಯ, ಆತ್ಮಸಾಕ್ಷಿಯ ಪಕ್ಷ ಏನು ಹೇಳುತ್ತದೆ? ಪಕ್ಷಿಯೇ ಆಗಲಿ, ಮನುಷ್ಯರೇ ಆಗಲಿ, 'ಜೀವ' ಒಂದೇ ಅಲ್ಲವೆ? ಬಾಳಿ ಬದುಕುವ ಹಕ್ಕು ಅವುಗಳಿಗೂ ಇದೆಯಲ್ಲವೇ? ಪ್ರಕೃತಿ ಸಮತೋಲನದಲ್ಲಿ ಪ್ರತಿಯೊಂದು ಜೀವಿಯ ಪಾತ್ರವು ಮಹತ್ವದ್ದಲ್ಲವೆ?.

ಇತಿಮಿತಿಗಳನ್ನು ಯೋಚಿಸದೆ, ಪರಿಣಾಮಗಳನ್ನು ಊಹಿಸದೆ ನೈಸರ್ಗಿಕ ಸಂಪನ್ಮೂಲಗಳನ್ನು ಮನಸಾ ಇಚ್ಛೆ ಸೂರೆ ಮಾಡುತ್ತಿದ್ದರೆ ಪರಿಸ್ಥಿತಿ ಏನಾಗಬಹುದೆಂಬುದನ್ನು ಮುಂದೆ ನಿರ್ಗತಿಕರಿಗೆ ಮಾತ್ರವಲ್ಲ ಜನಸಾಮಾನ್ಯರಿಗೂ ಯಾವ ಪರಿಸ್ಥಿತಿ ಬರುತ್ತದೆ ಎಂಬುದನ್ನು ಪಕ್ಷಿಗಳ ಈ ಸಾಮೂಹಿಕ ಆತ್ಮಹತ್ಯೆ ಎತ್ತಿ ಹೇಳುತ್ತಿದೆ.

*ಮೂಲ: ಸಂಪಾದಕೀಯ, ಹನಿಬೀ **13(2)**, ಏ-ಜೂ. **2002***

ನುಸಿ ಪೀಡೆ ಸಮಸ್ಯೆಗೆ ಪರಿಹಾರಗಳು

ಇಕ್ರಾ (ICRA) ಸಲಹೆಗಳು:

ತೆಂಗಿನ ನುಸಿ ಪೀಡೆ ನಿಯಂತ್ರಣಕ್ಕಾಗಿ ಅನೇಕ ಸಂಘ ಸಂಸ್ಥೆಗಳು, ಕೃಷಿ ವಿಶ್ವ ವಿದ್ಯಾಲಯಗಳು ಮತ್ತು ಸರ್ಕಾರ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರೂ ನುಸಿ ಪೀಡೆಯ ಬಾಧೆ ಕಡಿಮೆಯಾಗಿಲ್ಲದ ಪರಿಸ್ಥಿತಿಯಲ್ಲಿ ತಿರುವನಂತಪುರದ ಕೃಷಿ ಕಾಲೇಜಿನ ಕೀಟಶಾಸ್ತ್ರ ವಿಭಾಗ, ಕೇರಳ ಕೃಷಿ ವಿಶ್ವವಿದ್ಯಾನಿಲಯ, ಟಿ. ಸ್ಪೇಸ್ಸ್ ಅಂಡ್ ಕಂಪನಿ ಮತ್ತು ವಿಠ್ಠಲಮಲ್ಯ ಸೈಂಟಿಫಿಕ್ ರಿಸರ್ಚ್ ಫೌಂಡೇಷನ್ ಇವರು, ದೇಶೀಯ ಕೀಟ ನಿಯಂತ್ರಣ ಪದ್ಧತಿಗಳ ಅಧ್ಯಯನದ ಆಧಾರದ ಮೇಲೆ ಸಂಶೋಧನೆ ಮಾಡಿ, ಕೆಲವು ಸಲಹೆಗಳನ್ನು ನೀಡಿದ್ದಾರೆ.

- ಶೇ 2ರ ಪ್ರಮಾಣದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ ಮತ್ತು ಸೋಪಿನ ದ್ರಾವಣ ಸಿಂಪಡಿಸುವುದು.
- ಶೇ 2ರ ಪ್ರಮಾಣದಲ್ಲಿ ಬೇವಿನ ಎಣ್ಣೆ, ಬೆಳ್ಳುಳ್ಳಿ ಸೋಪಿನ ದ್ರಾವಣ ಮತ್ತು ಶೇ 4ರ ಪ್ರಮಾಣದಲ್ಲಿ ತೇವಗೊಳಿಸಿದ ಗಂಧಕವನ್ನು ಬೆರೆಸಿ ಸಿಂಪಡಿಸುವುದು.
- ಶೇ 2ರ ಪ್ರಮಾಣದಲ್ಲಿ ಹೊಂಗೆ (*Pongamea*) ಎಣ್ಣೆ, ಬೆಳ್ಳುಳ್ಳಿ ಮತ್ತು ಸೋಪಿನ ದ್ರಾವಣ ಸಿಂಪಡಿಸುವುದು.

ಮೂಲ: ಸಾಗುವಳಿ, ಜುಲೈ-ಆಗಸ್ಟ್ 2002

ಗ್ರೀನ್ (GREEN) ಫೌಂಡೇಷನ್ ಸಲಹೆ:

ಬೇಲಿ ಗಿಡದ ಎಲೆ, ಎಕ್ಕದ ಎಲೆ, ಬೇವಿನ ಬೀಜ, ಲಕ್ಕಿ ಸೊಪ್ಪು, ಲೋಳೆ (*Aloe vera*) ಸರ, ಅರಿಶಿನದ ತುಂಡು ಮತ್ತು ಸೀತಾಫಲದ ಎಲೆ, ಇವೆಲ್ಲವನ್ನು ತಲಾ ಒಂದೊಂದು ಕೇಜಿಯಂತೆ, ಬೇರೆ ಬೇರೆಯಾಗಿ ರುಬ್ಬಿ ರಸ ತೆಗೆದು, ಈ ರಸವನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಒಂದು ವಾರ ನೆನೆಸಿ ನಂತರ ಪ್ರತಿ ಮೂರು ಲೀಟರ್ ನೀರಿಗೆ 600 ಮಿ.ಲಿ. ಈ ರಸವನ್ನು ಬೆರೆಸಿ ತೆಂಗಿನ ಸುಳಿಯ ಮೇಲೆ ಅಥವಾ ಹೊಸದಾಗಿ ಅರಳುತ್ತಿರುವ ಹೊಂಬಾಳೆಯ ಮೇಲೆ ಎರಡು ತಿಂಗಳಿಗೊಮ್ಮೆ ಸುರಿಯುವುದರಿಂದ ನುಸಿ ಪೀಡೆಯನ್ನು ನಿಯಂತ್ರಿಸಬಹುದಂತೆ.

ಮೂಲ: 'ಗ್ರಾಮ ಮಿತ್ರ' ಕ್ಯಾಲೆಂಡರ್
ಗ್ರೀನ್ ಪ್ರತಿಷ್ಠಾನ, ತಳಿ

ಕೋಸಿನಲ್ಲಿ ಕೀಟ ನಿಯಂತ್ರಣ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ಅರದೇಶನಹಳ್ಳಿಯ ಕೃಷ್ಣಪ್ಪನವರು ಹೂ ಕೋಸು ಮತ್ತು ಎಲೆಕೋಸಿಗೆ ಹಾನಿ ಮಾಡುವ ಹೂಜಿ ಹುಳು ನಿಯಂತ್ರಿಸಲು ಬೇವಿನ ಬೀಜದ ಕಷಾಯವನ್ನು ಸಿಂಪಡಿಸುತ್ತಾರಂತೆ. ಅವರು ಒಂದು ಕೆ.ಜಿ. ಬೇವಿನ ಬೀಜವನ್ನು ನೆನೆಸಿ, ಅರೆದು 100 ಲೀಟರ್ ನೀರಿನೊಂದಿಗೆ ಬೆರೆಸಿ ಅದನ್ನು ಸೋಸಿ ಬೆಳೆಗೆ ಸಿಂಪಡಿಸುತ್ತಾರಂತೆ.

ಸಂಗ್ರಹ: ಶಶಿಕಲ ಎಸ್.ಜಿ.

ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಹೀಗೊಂದು ಸ್ವ ಉದ್ಯೋಗ

ತಮಿಳು ನಾಡಿನ, ಎರೋಡ್ ಜಿಲ್ಲೆಯ ಶ್ರೀ ಸೆಲ್ಲಮುತ್ತುರವರು ಮೂಲತ: ಬೆಳೆಗಳಿಗೆ ಔಷಧಿ ಸಿಂಪಡಿಸುವ ನೌಕರಿ ಮಾಡುತ್ತಿದ್ದರು. ಇದರಿಂದ ಬರುವ ಕೂಲಿ ಹಣದಲ್ಲಿ ಜೀವನ ಸಾಗಿಸುತ್ತಿದ್ದರು. ಪ್ರತಿ ದಿನ ರಾಸಾಯನಿಕ ಔಷಧಿಗಳ ಸಿಂಪರಣೆಯಿಂದಾಗಿ ಸೆಲ್ಲಮುತ್ತುಗೆ ತಲೆನೋವು, ವಾಂತಿ ಮತ್ತು ತಲೆ ಸುತ್ತಲು ಪ್ರಾರಂಭವಾಯಿತು. ವೈದ್ಯರ ಬಳಿ ಹೋದಾಗ ಸೆಲ್ಲಮುತ್ತುವಿನ ಹಿನ್ನೆಲೆ ಅರಿತ ವೈದ್ಯರು, ನೀನೇಕೆ ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸಿ ಸಿಂಪಡಿಸಬಾರದು? ಇದರಿಂದ ನಿನಗು ಪ್ರಕೃತಿಗು ಮತ್ತು ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂದರು. ಅವರ ಸಲಹೆಯಂತೆ ಸೆಲ್ಲಮುತ್ತು ವಿವಿಧ ರೀತಿಯ ಪ್ರಯೋಗ ನಡೆಸಿ ಕೊನೆಗೆ 3 ಕೆ.ಜಿ. ಲಕ್ಕಿ ಸೊಪ್ಪು (*Vitex negundo*), 3 ಕೆ.ಜಿ. ವಿಷಮಧಾರಿ ಸೊಪ್ಪು (*Clerodendron inermi*), 2 ಕೆ.ಜಿ. ಕತ್ತಾಳೆ ಪಟ್ಟೆ (*Agave sisalana*) ಮತ್ತು 3 ಕೆ.ಜಿ. ಬೇವಿನ ಬೀಜ ಚೆನ್ನಾಗಿ ರುಬ್ಬಿ, 100 ಲೀ ನೀರಿನಲ್ಲಿ ಬೆರೆಸಿದರು. ಆದರೆ ಯಾರನ್ನು ಕೇಳಿದರು, ಇದನ್ನು ಅವರ ಬೆಳೆಗೆ ಸಿಂಪಡಿಸಲು ಒಪ್ಪಲಿಲ್ಲ. ಕೊನೆಗೆ ಸೆಲ್ಲಮುತ್ತು ಅವರ ಸಂಬಂಧಿಯೊಬ್ಬರ ಹೊಲಕ್ಕೆ ಅವರ ಅನುಮತಿ ಪಡೆಯದೆ, ಸಂಜೆ ವೇಳೆ ಸಿಂಪಡಿಸಿ, ಒಂದು ವಾರದ ನಂತರ ವಿಚಾರ ತಿಳಿಸಿದಾಗ, ಅವರು ಆಶ್ಚರ್ಯದಿಂದ ತಮ್ಮ ಹೊಲದಲ್ಲಿ ಒಂದು ವಾರದಿಂದ ಯಾವುದೇ ಕೀಟಗಳ ಹಾವಳಿ ಕಂಡು ಬಂದಿಲ್ಲವೆಂದು ಹೇಳಿ, 3 ಎಕರೆ ಈರುಳ್ಳಿ ಹೊಲಕ್ಕೆ ಈ ಗಿಡ ಮೂಲಿಕೆಯನ್ನು ಸಿಂಪಡಿಸಲು ಹೇಳಿ ಹಣ ಕೊಟ್ಟರು. ಹೀಗೆ ಪ್ರಾರಂಭವಾದ ಸೆಲ್ಲಮುತ್ತುರವರ ಸ್ವ ಉದ್ಯೋಗ ಈಗ ಆ ಪ್ರದೇಶದಲ್ಲಿ ಪ್ರಸಿದ್ಧವಾಗಿದೆ. ದಿನಕ್ಕೆ, ರೂ.500 ರಿಂದ 600 ರಷ್ಟು ಹಣಗಳಿಕೆ ಮಾಡುತ್ತಿದ್ದಾರೆ. ಸೆಲ್ಲಮುತ್ತುರವರ ಈ ಸಾಧನೆ ನಮ್ಮ ಹಳ್ಳಿಯ ನಿರುದ್ಯೋಗಿಗಳಿಗೆ ಪ್ರೇರಣೆಯಾಗಬಹುದಲ್ಲವೆ?

ಪಂಚಗವ್ಯ - ಪ್ರಯೋಗದ ಫಲಿತಾಂಶಗಳು

ತಮಿಳುನಾಡಿನ, ಎರೋಡ್ ಜಿಲ್ಲೆಯ ನಟರಾಜರವರು 5 ಕೆ.ಜಿ. ಸಗಣಿ, 5 ಲೀಟರ್ ನೀರು, 2 ಲೀ ಹಸುವಿನ ಹಾಲು, 2 ಲೀ ಮೊಸರು, ಒಂದು ಲೀಟರ್ ತುಪ್ಪ ಮತ್ತು 2 ಲೀ ಕಬ್ಬಿನ ರಸವನ್ನು ಒಂದು ಮಣ್ಣಿನ ಮಡಕೆಯಲ್ಲಿ ಹಾಕಿ, ಚೆನ್ನಾಗಿ ಬೆರೆಸಿ ನೆರಳಿನಲ್ಲಿ ಶೇಖರಿಸಿ ಇಡುತ್ತಾರೆ. ಮೂರು ವಾರಗಳ ನಂತರ 2 ಲೀಟರಿನಷ್ಟು ಈ ಪಂಚಗವ್ಯವನ್ನು ತೆಗೆದು 100 ಲೀ ನೀರಿನಲ್ಲಿ ಬೆರೆಸಿ ಒಂದು ಎಕರೆ ಹಣ್ಣಿನ ಬೆಳೆಗಳಿಗೆ ಸಿಂಪಡಿಸುತ್ತಾರಂತೆ. ಈ ಪಂಚಗವ್ಯವನ್ನು ಅವರು 7 ತಿಂಗಳು ಶೇಖರಿಸಿಡುತ್ತಾರಂತೆ.

ಇದೇ ಹಳ್ಳಿಯ ಈಶ್ವರ ಮೂರ್ತಿ ಎಂಬ ರೈತರು ನಟರಾಜ್‌ರವರಿಂದ ಪಂಚಗವ್ಯ ಪಡೆದು ಬತ್ತಕ್ಕೆ, ನಾಟಿ ಮಾಡಿದ 25 ದಿನಗಳ ನಂತರ ಮತ್ತು 39 ದಿನಗಳ ನಂತರ ಸಿಂಪಡಿಸಿದ್ದರಿಂದ ಬತ್ತದಲ್ಲಿ ಹೆಚ್ಚು ಇಳುವರಿಯನ್ನು ಪಡೆದರಂತೆ. ಈಶ್ವರ ಮೂರ್ತಿಯವರು ತಮ್ಮ ಮಲ್ಲಿಗೆ ತೋಟಕ್ಕೆ ಈ ಪಂಚಗವ್ಯ ಸಿಂಪಡಿಸಿದ್ದರಿಂದ ಮಲ್ಲಿಗೆ ಬಳ್ಳಿ ನಿರಂತರವಾಗಿ ಹೂ ಬಿಟ್ಟಿತಂತೆ. ನುಗ್ಗೆ ಗಿಡದ ಬುಡಕ್ಕೆ 2 ಲೀ ಪಂಚಗವ್ಯ ಹಾಕಿದ್ದರಿಂದ ಅವರು ಅತಿ ಹೆಚ್ಚು ನುಗ್ಗೆ ಕಾಯಿ ಪಡೆದರಂತೆ. ಅಂತೆಯೇ ಈ ಪಂಚಗವ್ಯವನ್ನು ಶೇಂಗದ ಬೀಜೋಪಚಾರಕ್ಕೆ, ಅರಿಶಿನದ ಶೀಘ್ರ ಬೆಳವಣಿಗೆಗೆ ಬಳಸಬಹುದು ಎಂಬುದು ಈಶ್ವರಪ್ಪನವರ ಮತ್ತು ನಟರಾಜ್‌ರವರ ಅನುಭವವಾಗಿದೆ.


ಮೂಲ: ಸಾಂಪ್ರದಾಯಿಕ ಕೃಷಿ ಮತ್ತು ದೇಶೀಯ ಪಶು ಸಾಕಾಣಿಕ ತರಬೇತಿ ಮಾರ್ಗದರ್ಶಿ, ಸೇವ (SEVA) ಸಂಸ್ಥೆ, ಮಧುರೈ, ತಮಿಳು ನಾಡು

ಸಗಣಿ ಬಗಡ ಎತ್ತುವ ಯಂತ್ರ

ಗೋಬರ್ ಅನಿಲ ಸ್ಥಾವರ ಹೊಂದಿರುವವರನ್ನು ಬಹುವಾಗಿ ಕಾಡುವ ಸಮಸ್ಯೆ ಎಂದರೆ ಅನಿಲ ಉತ್ಪಾದನೆಯ ನಂತರ ಹೊರ ಬರುವ ಸಗಣಿ ಬಗಡವನ್ನು ಕಾಂಪೋಸ್ಟ್ ಗುಂಡಿಗೆ ಸಮವಾಗಿ ಹರಡುವುದು. ಇದಕ್ಕಾಗಿ ಸಾಕಷ್ಟು ಮಾನವ ಶ್ರಮ, ಸಮಯ ಬೇಕು. ರಸ ರೂಪದ ಈ ಗೊಬ್ಬರವನ್ನು ಹರಡುವುದು ಸ್ವಲ್ಪ ಕಿರಿ ಕಿರಿ. ಈ ಕೆಲಸ ಮಾಡಲು ಆಳುಗಳು ಸಿಗುವುದೂ ಕಷ್ಟ. ಈ ಸಮಸ್ಯೆಗೆ ಪರಿಹಾರ ನೀಡಬಲ್ಲ ಯಂತ್ರ ಒಂದನ್ನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪಾದ ನಮ್ಮ ತಳಮಟ್ಟದ ಅನುಶೋಧಕ ಶ್ರೀ ನರಸಿಂಹ ಭಂಡಾರಿಯವರು ಕಂಡು ಹಿಡಿದಿದ್ದಾರೆ.

ಇದೊಂದು ಸರಳ ಯಂತ್ರವಾಗಿದ್ದು, ಯಾವ ಇಂಧನದ ಸಹಾಯವಿಲ್ಲದೆ, ಕಾರ್ಯ ನಿರ್ವಹಿಸುವ ಮಾನವ ಚಾಲಿತ ಯಂತ್ರವಾಗಿದೆ. ಒಬ್ಬ ಮನುಷ್ಯ ಸುಲಭವಾಗಿ ಈ ಯಂತ್ರವನ್ನು ಹೊತ್ತೊಯ್ಯಬಹುದು.

ಈ ಯಂತ್ರದಿಂದ ಸಗಣಿ ಬಗಡ ಎತ್ತುವ ಕೆಲಸವಲ್ಲದೆ, ಸುಮಾರು 30 ಅಡಿಯಿಂದ 70 ಅಡಿ ಆಳದಿಂದ ನೀರೆತ್ತಬಹುದು. ಇದರಿಂದ ನಿಮಿಷಕ್ಕೆ 60 ಲೀಟರು ನೀರನ್ನು ಎತ್ತಬಹುದು. ಇದು ಸಣ್ಣ ಹಾಗು ಅತಿ ಸಣ್ಣ ರೈತರಿಗೆ ಬಹಳ ಅನುಕೂಲಕರವಾಗುವ ಯಂತ್ರವಾಗಿದೆ. ಈ ಯಂತ್ರದ ಸಹಾಯದಿಂದ ಅಡಿಕೆ ಮರಗಳಿಗೆ ಮತ್ತು ತೆಂಗಿನ ಮರಗಳಿಗೆ ಔಷಧಿ ಸಿಂಪಡಿಸಬಹುದು.



ಕೃಷಿ ಉತ್ಪನ್ನಗಳನ್ನು ಒಣಗಿಸುವ ಯಂತ್ರ

ಸಾಮಾನ್ಯವಾಗಿ ಕೃಷಿ ಉತ್ಪನ್ನಗಳನ್ನು ಬಹಳ ಕಾಲ ಶೇಖರಿಸಿ ಇಡುವುದು ಕಷ್ಟ. ಸಮರ್ಪಕವಾಗಿ ತೇವಾಂಶವನ್ನು ಇಂಗಿಸಿ, ಒಣಗಿಸುವುದರಿಂದ ಕೃಷಿ ಉತ್ಪನ್ನಗಳನ್ನು ಹೆಚ್ಚು ಕಾಲ ಶೇಖರಿಸಿಡಬಹುದು. ಕೇರಳ ರಾಜ್ಯದ ತಿರುವನಂತಪುರದ ಥಾಮಸ್‌ರವರು ಇದಕ್ಕೊಂದು ಉತ್ತಮ ಯಂತ್ರ ಕಂಡು ಹಿಡಿದಿದ್ದಾರೆ. ಹಿಂದಿನ ಸಾಂಪ್ರದಾಯಿಕ ಪದ್ಧತಿಗಳ ಆಧಾರದ ಮೇಲೆ ಥಾಮಸ್‌ರವರು ಈ ಯಂತ್ರವನ್ನು ಅನುಷ್ಠಾನಗೊಳಿಸಿದ್ದಾರೆ.



ಒಣಗಿಸುವ ಸ್ಥಳದ ಹೊರಗೆ ಗಾಳಿಯನ್ನು ಬಿಸಿಗೊಳಿಸಿ ಈ ಯಂತ್ರದೊಳಗೆ ಹಾಯಿಸಲಾಗುತ್ತದೆ. ಈ ಬಿಸಿ ಗಾಳಿಯು ಯಂತ್ರದೊಳಗೆ ಕೆಳಗಿನಿಂದ ಮೇಲಿನ ಭಾಗಕ್ಕೆ ಚಲಿಸುವಂತೆ ಮಾಡಲಾಗಿದೆ. ಈ ಯಂತ್ರದೊಳಗೆ, ಸಣ್ಣ ಸಣ್ಣ ತೂತುಗಳನ್ನು ಹೊಂದಿರುವ ನಾಲ್ಕು ತಟ್ಟೆಗಳನ್ನು ಜೋಡಿಸಿ ಅದರಲ್ಲಿ ಒಣಗಿಸ ಬೇಕಾಗಿರುವ ವಸ್ತುವನ್ನು ಇಡಲಾಗುತ್ತದೆ. ಬಿಸಿ ಗಾಳಿಯು ಈ ತಟ್ಟೆಗಳ ಮುಖಾಂತರ ಹಾದು ಯಂತ್ರದ ಮೇಲ್ಭಾಗದವರೆಗೆ ಹೋಗಿ ನಂತರ ಮತ್ತೆ ಹಿಮ್ಮುಖವಾಗಿ ಚಲಿಸುವುದರಿಂದ ವಸ್ತುಗಳು ಬೇಗ ಮತ್ತು ಸೂಕ್ತವಾಗಿ ಒಣಗುತ್ತವೆ.

ಮೂಲ: ಹನಿಬೀ, 12(3), ಜು-ಸೆಂ. 2001

ದೇಶೀಯ ಜಾಣ್ಮೆ

ಉತ್ತಮ ಬತ್ತದ ಬೆಳೆಗೆ

ಬತ್ತದಲ್ಲಿ ಉತ್ತಮ ಬೆಳೆ ಬೆಳೆದು, ಹೆಚ್ಚು ಇಳುವರಿ ಪಡೆಯಲು ತಮಿಳುನಾಡಿನ ಸಿವಗಂಗೆ ಜಿಲ್ಲೆಯ ಆರುಮುಗಂ ಅವರು ಪೈರು ನಾಟಿ ಮಾಡಿದ 10 ದಿನಗಳ ನಂತರ ಎಕರೆಗೆ 30 ಕೆ.ಜಿ.ಯಷ್ಟು ಹುಣಸೆ ಬೀಜಗಳನ್ನು ಎರಚುತ್ತಾರಂತೆ. ಈ ಪದ್ಧತಿಯನ್ನು ಅನುಸರಿಸುವುದರಿಂದ ಬತ್ತದಲ್ಲಿ ಹೆಚ್ಚು ಇಳುವರಿ ಪಡೆಯಬಹುದು ಎಂಬುದು ಆರುಮುಗಂ ಅವರ ಅನುಭವ.

ಬೇವಿನೆಣ್ಣೆಯ ಕಾರ್ಯ ಸಾಮರ್ಥ್ಯ ಹೆಚ್ಚಿಸಲು

ಬೆಳೆಗಳಿಗೆ ಬರುವ ಬಹುತೇಕ ಕೀಟಗಳ ನಿಯಂತ್ರಣಕ್ಕೆ ಬೇವಿನ ಎಣ್ಣೆ ಸಿಂಪಡಿಸುವುದು ರೂಢಿಯಲ್ಲಿದೆ. ಬೆಳೆಗೆ ಸಿಂಪಡಿಸುವ ಮುನ್ನ ಒಂದು ಲೀಟರ್ ಬೇವಿನ ಎಣ್ಣೆಯನ್ನು, 3 ಕೆಜಿ ನುಣ್ಣನೆಯ ಮರಳಿನೊಂದಿಗೆ ಬೆರೆಸಿ ನಂತರ ಈ ಮಿಶ್ರಣಕ್ಕೆ 3 ಕೆ.ಜಿ ಹಸುವಿನ ಸಗಣಿ ಸೇರಿಸಿ ಎಲ್ಲವನ್ನು ಚೆನ್ನಾಗಿ ಬೆರೆಸಿ, ಈ ಮಿಶ್ರಣವನ್ನು 3 ದಿನಗಳು ನೆರಳಿನಲ್ಲಿ ಶೇಖರಿಸಿಡಬೇಕು. ನಂತರ 4ನೇ ದಿನ 150 ಲೀ ನೀರಿನಲ್ಲಿ ಇದನ್ನು ಬೆರೆಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಬೇವಿನ ಎಣ್ಣೆಯ ಕಾರ್ಯ ಸಾಮರ್ಥ್ಯ ಹೆಚ್ಚುತ್ತದೆ ಎಂಬುದು ತಮಿಳುನಾಡಿನ ಎರೋಡ್ ಜಿಲ್ಲೆಯ ಮಣಿಯವರ ಅನುಭವ.

ದನಗಳು ಮೆಲುಕು ಹಾಕದಿದ್ದಾಗ

ಹಾಸನಜಿಲ್ಲೆಯ, ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇ ಶಿವರದ ಬಸವರಾಜು ಅವರು ದನಗಳು ಹೆಚ್ಚು ಮೇದು (ಆಹಾರ ಸೇವಿಸಿ) ಮೆಲುಕು ಹಾಕದೆ, ಹೊಟ್ಟೆ ಉಬ್ಬರದಿಂದ ನರಳುತ್ತಿದ್ದಾಗ ಎಕ್ಕದ ಗಿಡ(*Calotropis sp*)ದ ಬುಡದಲ್ಲಿನ ರೆಂಬೆಯೊಂದನ್ನು 3 ಅಡಿಯಷ್ಟು ಕತ್ತರಿಸಿ ತಂದು, ಎಲೆಗಳನ್ನು ಕಿತ್ತು ಹಾಕಿ, ದನಗಳಿಗೆ ತಿನ್ನಿಸಿದರಂತೆ. ಈ ಕಡ್ಡಿ ಕಡಿದಾಗ ಕಹಿಯಾಗುವುದರಿಂದ ವಾಂತಿ ಬಂದಂತಾಗಿ ದನಗಳು ಮೆಲುಕು ಹಾಕಲು ಪ್ರಾರಂಭಿಸಿದವಂತೆ. ಸಂತೇಶಿವರರ ಈ ಪದ್ಧತಿಯನ್ನು ಗದಗಿನ ಹೊನ್ನೇ ಗೌಡರು ಸ್ವಯಂ ಅನುಸರಿಸಿ ನೋಡಿರುತ್ತಾರೆ.

ಹಸು ಸಾಕುವವರಿಗೊಂದು ಎಚ್ಚರಿಕೆ

ಹಸುಗಳು ಗರ್ಭ ಧರಿಸಿದಾಗ ಅಥವಾ ಕೃತಕ ಗರ್ಭಧಾರಣೆ ಮಾಡಿಸಿದ ನಂತರ, ಅವು ಬಾಳೆ ಗೊನೆ ಅಥವಾ ಬಾಳೆ ಗೊನೆಯ ಮುಂಭಾಗದಲ್ಲಿ ಬಿಡುವ ಹೂ ತಿನ್ನದಂತೆ ನೋಡಿಕೊಳ್ಳಿ, ಈ ಹೂವು ತಿಂದರೆ ಹಸುಗಳಿಗೆ ಗರ್ಭ ಪಾತವಾಗುತ್ತದೆ ಮತ್ತು ಪ್ರತಿ ದಿನ ತಿಂದರೆ ಹಸುಗಳಲ್ಲಿ ಗರ್ಭ ಧರಿಸುವ ಶಕ್ತಿ ಕುಂದುತ್ತದೆ ಎಂಬುದು ಹಾಸನ ಜಿಲ್ಲೆಯ, ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರದ ನಿವೇದಿತ ಅವರ ಅನುಭವ. ಹಾಲು ಕೊಡುವ ಹಸುಗಳಿಗೆ ಬಾಳೆ ಹೂ ತಿನ್ನಿಸಿದರೆ ಹಾಲು ಬತ್ತುತ್ತದೆ ಎಂಬ ಮಾಹಿತಿಯನ್ನು ಅವರು ನೀಡಿದ್ದಾರೆ.

ಕೃಷ್ಣಪ್ಪನವರ ಅನುಶೋಧನೆಗಳು

ಹಸುಗಳಿಗೆ ಗಾಯವಾದಾಗ

ಹಸುಗಳಿಗೆ ಗಾಯವಾಗಿ, ಹುಳು ಬಿದ್ದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅರದೇಶನಳ್ಳಿಯ ಕೃಷ್ಣಪ್ಪನವರು ಹೊಗೆಸೊಪ್ಪು, ಆಲಮಂಡಿ ಸೊಪ್ಪು ಮತ್ತು ಕರ್ಪೂರವನ್ನು ರುಬ್ಬಿ ಗಾಯಕ್ಕೆ ಹಚ್ಚುತ್ತಾರಂತೆ.

ಹಸುಗಳಿಗೆ ಜಂತು ಹುಳು ಬಿದ್ದಾಗ

ಕರುಗಳಲ್ಲಿ ಜಂತು ಹುಳು ಮತ್ತು ಇತರೆ ಹುಳುಗಳ ಬಾಧೆಯಿಂದ ಹೊಟ್ಟೆನೋವು, ಹಳದಿ ಬಣ್ಣದ ಬೇಧಿ ಆಗುತ್ತದೆ. ಇಂತಹ ಸಮಯದಲ್ಲಿ 50 ಗ್ರಾಂ ಒಣಗಿದ ಶುಂಠಿ, 500 ಗ್ರಾಂ ಸೀಬೆ ಗಿಡದ ಎಳೆ ಎಲೆಗಳನ್ನು ಚೆನ್ನಾಗಿ ಕುಟ್ಟಿ ಕರುಗಳಿಗೆ ದಿನಕ್ಕೊಮ್ಮೆಯಂತೆ 5-6 ದಿನ ತಿನ್ನಿಸುವುದರಿಂದ ಹುಳು ಬಾಧೆ ಕಡಿಮೆಯಾಗಲಿದೆಯಂತೆ.

ಹಸುಗಳಲ್ಲಿ ಉಣ್ಣೆ ನಿಯಂತ್ರಣಕ್ಕೆ

ಹಸುಗಳ ಮೈಮೇಲೆ ಹುಳು ಬಿದ್ದಾಗ 1 ಕೆ.ಜಿ. ಚಿಗರೆಯ ಎಲೆ (*Albizia amara*) ಮತ್ತು ಅರ್ಧ ಕೆ.ಜಿ. ಬೇವಿನ ಎಲೆಯನ್ನು ಚೆನ್ನಾಗಿ ಅರೆದು, ಅದಕ್ಕೆ 2 ಕೆ.ಜಿ. ಕೆರೆ ಮಣ್ಣು ಹಾಕಿ ಸಾಕಷ್ಟು ನೀರು ಬೆರೆಸಿ ಹಸುಗಳ ಮೈಗೆ ಸವರಬೇಕು. ನಂತರ ಕೆಲವು ಗಂಟೆಗಳ ಕಾಲ ಹಸುವನ್ನು ಬಿಸಿಲಿನಲ್ಲಿ ನಿಲ್ಲಿಸಿ, ನಂತರ ಮೈ ತೊಳೆಯಬಹುದು. ಈ ರೀತಿ ವಾರಕ್ಕೊಮ್ಮೆ ಮಾಡಿದರೆ ಹಸುಗಳಿಗೆ ಯಾವ ಚರ್ಮ ರೋಗ ಅಥವಾ ಹುಳುಗಳ ಬಾಧೆ ಇರುವುದಿಲ್ಲ ಎಂಬುದು ಕೃಷ್ಣಪ್ಪನವರ ಅನುಭವ.

'ಜಾವಿಗೆ ಕೋಳಿ'ಯ ಕೃಷ್ಣ

ಕೃಷ್ಣಪ್ಪನವರು ಒಮ್ಮೆ ಚಿಕ್ಕ ಬಳ್ಳಾಪುರದಿಂದ ನಾಟಿಕೋಳಿ ಮೊಟ್ಟೆ ತಂದರಂತೆ, ಅದನ್ನು ಕಾವಿಗೆ ಇಟ್ಟು ಮರಿ ಮಾಡಿಸಿದಾಗ, ಅವರಿಗೆ ಈ ಮೊಟ್ಟೆಯಿಂದ ಬಂದ ಕೋಳಿ ಮರಿ ಇತರೆ ಮರಿಗಳಿಗಿಂತ ಭಿನ್ನವಾಗಿ ಕಂಡಿತಂತೆ. ಆ ಮರಿಯನ್ನು ಬೆಳೆಸಿ ಅದರ ಮೊಟ್ಟೆಯಿಂದ ಮತ್ತೆ ಮರಿ ಮಾಡಿಸಿದಾಗ ಬಲಿಷ್ಟವಾದ ತುಸು ಕೆಂಪು ಬಣ್ಣದ ಕೋಳಿ ಮರಿಗಳು ದೊರೆತಾಗಲೇ ಕೃಷ್ಣಪ್ಪನವರಿಗೆ ತಿಳಿದದ್ದು ಇದು ಪಂದ್ಯದ ಜಾವಿಗೆ ಕೋಳಿ ಎಂದು. ಈವರೆಗೆ 35 ಕೋಳಿ ಪಂದ್ಯಗಳಲ್ಲಿ ಗೆದ್ದಿರುವ ಕೃಷ್ಣಪ್ಪನವರ ಬಳಿ ಈ ಜಾತಿಯ 35 ಕೋಳಿಗಳಿವೆ. ಪಂದ್ಯಕ್ಕೆ ಹೆಸರಾಗಿರುವ ಈ ಕೋಳಿ ಮಾಂಸ ಗಟ್ಟಿಯಾಗಿದ್ದು ಹೆಚ್ಚು ಪೌಷ್ಠಿಕಾಂಶ ಹೊಂದಿರುತ್ತದೆ ಎಂಬುದು ಕೃಷ್ಣಪ್ಪನವರ ಅನುಭವ. ಒಂದು ಕೋಳಿಯ ಬೆಲೆ 500 ರೂ.ಗಳಿಂದ 1400 ರೂಪಾಯಿಗಳು. ಇಂತಹ ಒಂದು ವಿಶೇಷ ನಾಟಿ ಕೋಳಿಯ ಸಂವರ್ಧನೆ ನನ್ನ ಹವ್ಯಾಸ ಎನ್ನುತ್ತಾರೆ ಕೃಷ್ಣಪ್ಪನವರು.

ಹಸುಗಳಲ್ಲಿ ಜ್ವರ, ಕೆಮ್ಮು ನಿವಾರಣೆ

ಹಸುಗಳಿಗೆ ಜ್ವರ, ಕೆಮ್ಮು ಬಂದು ಮಂಕಾದಾಗ, ಒಂದು ಮಣ್ಣಿನ ಮಡಕೆಯೊಳಗೆ ಇದ್ದಿಲು ಹಾಕಿ, ಕೆಂಡ ಮಾಡಿ, ಅದಕ್ಕೆ ಬಲಿತ ಬೇವಿನ ಕಡ್ಡಿ, 10 ಗ್ರಾಂ ಬೇವಿನ ಬೀಜ, ತಲಾ 25 ಗ್ರಾಂ ಹೊಂಗೆ ಎಲೆ, ಎರುಂಬಳ್ಳಿ (*Cardiospermumhalica cabum*) ಎಲೆ ಮತ್ತು ತುಂಬೆ (*Leucas aspera*) ಎಲೆ ಹೊಗೆ ಬರಿಸಲು ಒಂದು ಚಿಟಿಕೆಯಷ್ಟು ಸಾಂಬ್ರಾಣಿ ಹಾಕಿ ಹಸುಗಳಿಗೆ ಮೂಗಿನ ಸುತ್ತ ಬೆವರು ಬರುವವರೆಗೆ ಹೊಗೆ ಹಾಕಬೇಕು. ಈ ರೀತಿ ದಿನಕ್ಕೆರಡು ಬಾರಿ 2-3 ದಿನ ಮಾಡಿದರೆ ಹಸು ಬೇಗ ಗುಣವಾಗುತ್ತದೆ. ಈ ರೀತಿ ಮಾಡುವುದರೊಂದಿಗೆ, ಹಸುವಿಗೆ ದಿನಕ್ಕೆರಡು ಬಾರಿ 250 ಗ್ರಾಂ ಕೊತ್ತಂಬರಿ ಸೊಪ್ಪು ಮತ್ತು 500 ಗ್ರಾಂ ಮೂಲಂಗಿ ತಿನ್ನಿಸಬಹುದು. ಇದು ತಮಿಳು ನಾಡಿನ ರೈತ ಪೆರುಮಾಲ ಕಾಂಡರ್‌ರು ಅನುಸರಿಸುತ್ತಿರುವ ಪದ್ಧತಿ.

Membership Fee for Honey Bee Network

Category	South Asia*	International
Annual Membership		
Student/Farmer	Rs.100	$20
Scientist/Professional/NGO	Rs.150	$30
Supporter	Rs.500	$50
Institution/Library	Rs.2500	$200
Life Membership		
Individual	Rs.2500	$500
Instiution/Library	Rs.10,000	$1000

** includes: India, Nepal, Bhutan, Bangladesh, Pakistan, Sri Lanka and The Maldives.*

ಮೂಲ: ಗಾಯಿತ್ರಿ ದಿನೇಶ್, ಬಾವಿ ಕೈಸರು, ಶಿವಮೊಗ್ಗ

ದಾಸವಾಳ ಸೊಪ್ಪಿನ ದೋಸೆ

ಒಂದು ಗಂಟೆಯ ಮೊದಲು ಅಕ್ಕಿ, ಉದ್ದು, ಮೆಂತ್ಯೆಯನ್ನು ಬೇರೆ ಬೇರೆಯಾಗಿ ನೆನೆಸಿಟ್ಟುಕೊಳ್ಳಬೇಕು. ಉದ್ದು ಮೆಂತ್ಯೆಯನ್ನೇ ಮೊದಲು ರುಬ್ಬಿ ಸ್ವಲ್ಪ ಸಣ್ಣವಾದ ನಂತರ ಅಕ್ಕಿ ಹಾಗೂ ದಾಸವಾಳದ ಸೊಪ್ಪನ್ನು ಹಾಕಿ ರುಬ್ಬ ಬೇಕು. ರುಚಿಗೆ ತಕ್ಕಷ್ಟು ಉಪ್ಪನ್ನು ಹಿಟ್ಟಿಗೆ ಸೇರಿಸಬೇಕು.

ಕಾವಲಿಯಲ್ಲಿ ಹಿಟ್ಟನ್ನು ಹಾಕಿ ದೋಸೆಯನ್ನು ಸಣ್ಣ ಉರಿಯಲ್ಲಿ ಕಾಯಿಸಬೇಕು. ದೋಸೆಗೆ ಎಣ್ಣೆಯನ್ನು ಸವರಿ ಕೆಂಪಗೆ ಆಗುವವರೆಗೂ ಕಾಯಿಸಿ ಚಟ್ನಿಯೊಂದಿಗೆ ತಿನ್ನಲು ತುಂಬಾ ರುಚಿಕರ ಮತ್ತು ಆರೋಗ್ಯ ದೃಷ್ಟಿಯಿಂದಲೂ ತುಂಬ ಒಳ್ಳೆಯದು. ಕುರು ಕಾಣಿಸಿಕೊಂಡಾಗ ಈ ರೀತಿಯ ದೋಸೆ ಸೇವನೆಯಿಂದ ಅದನ್ನು ನಿವಾರಿಸಬಹುದು.

ಕಳಲೆ (ಎಳೆ ಬಿದಿರು) ಪಲ್ಯ

ಎಳೆ ಬಿದಿರು (ಕಳಲೆ) ತಂದು ಮೊದಲು ಅದರ ಸಿಪ್ಪೆಯನ್ನು ಬಿಡಿಸಿಕೊಂಡು ಮೆದುವಾಗಿರುವಷ್ಟು ಭಾಗವನ್ನು ಮಾತ್ರ ಸಣ್ಣದಾಗಿ ಮತ್ತು ತೆಳುವಾಗಿ ಹೆಚ್ಚಿ ನೀರಿನಲ್ಲಿ 2 ರಿಂದ 3 ದಿನ ನೆನೆಸಿ ಇಟ್ಟುಕೊಳ್ಳಬೇಕು. ಪ್ರತಿ ದಿನವೂ ನೀರನ್ನು ತೆಗೆದು ಬೇರೆ ನೀರನ್ನು ಹಾಕಬೇಕು. ಇಲ್ಲದಿದ್ದರೆ ಅದು ವಾಸನೆ ಬರುತ್ತದೆ. ಒಂದು ಮುಷ್ಟಿಯಷ್ಟು ಮೆಂತ್ಯೆಯನ್ನು 1 ಗಂಟೆ ಮೊದಲು ನೆನೆಸಿಡಬೇಕು.

ನೀರಿನಿಂದ ಕೊಚ್ಚಿದ ಕಳಲೆಯನ್ನು ಹಿಂಡಿ ತೆಗೆದು ಒಂದು ಪಾತ್ರೆಯಲ್ಲಿ ಇಟ್ಟುಕೊಳ್ಳಬೇಕು. ಬಾಣಲೆಯಲ್ಲಿ ಎಣ್ಣೆ ಸಾಸಿವೆ, ಉದ್ದಿನ ಬೇಳೆ ಹಾಕಿ ಒಗ್ಗರಣೆ ಮಾಡಬೇಕು. ನಂತರ ಕಳಲೆ ಮತ್ತು ಮೊದಲೇ ನೆನೆಸಿಟ್ಟ ಮೆಂತ್ಯೆಯನ್ನು ಹಾಕಿ ಹುರಿಯಬೇಕು.

ಮೆಣಸಿನ ಕಾಯಿ ತೆಂಗಿನ ತುರಿಯನ್ನು ಗಟ್ಟಿಯಾಗಿ ರುಬ್ಬಿಕೊಂಡಿದ್ದು ಹುರಿಯುತ್ತಿರುವ ಕಳಲೆಯೊಂದಿಗೆ ಸೇರಿಸಿ ನೀರು ಆರುವವರೆಗೂ ಸಣ್ಣ ಉರಿಯಲ್ಲಿ ಹುರಿಯುತ್ತಿರಬೇಕು. ನಂತರ ಕೆಳಗಿಳಿಸಬೇಕು. ಇದನ್ನು ಅನ್ನದ ಜೊತೆ, ದೋಸೆ, ಇಡ್ಲಿ ಇವುಗಳ ಜೊತೆಯೂ ಸೇರಿಸಿ ಸೇವಿಸಬಹುದು.

ಸೂ ಚನೆ: ಇದರ ಸಿಪ್ಪೆಯನ್ನು ದನ ಕರುಗಳಿಗೆ ತಿನ್ನಲು ಸಿಕ್ಕದಂತಹ ಜಾಗದಲ್ಲಿ ಬಿಸಾಕಬೇಕು. ಏಕೆಂದರೆ ಇದರ ಸಿಪ್ಪೆ ತಿಂದರೆ ಅವುಗಳಿಗೆ ಅಪಾಯ.

ಕಾಕಿ ಸೊಪ್ಪಿನ ತಂಬ್ಳಿ

ಕಾಕಿ ಸೊಪ್ಪನ್ನು ಬೆಳಗಿನ ಹೊತ್ತು ಕೊಯ್ದು ತಂದು ಚೆನ್ನಾಗಿ ತೊಳೆದು ಹೆಚ್ಚಿಕೊಳ್ಳಬೇಕು. ನಂತರ ಬಾಣಲೆಯಲ್ಲಿ ತುಪ್ಪ, ಮೆಣಸಿನ ಕಾಳು, ಸಾಸಿವೆ ಹಾಕಿ ಹುರಿಯಬೇಕು. ನಂತರ ಕಾಕಿ ಸೊಪ್ಪನ್ನು ಹಾಕಿ ಹುರಿಯುತ್ತಿರಬೇಕು. ಸೊಪ್ಪಿನ ನೀರು ಆರಿ ಗರಿ ಗರಿಯಾದ ಮೇಲೆ ಕೆಳಗಿಳಿಸಬೇಕು. ನಂತರ ತೆಂಗಿನ ಕಾಯಿ ತುರಿ, ಹುರಿದ್ದ ಸೊಪ್ಪು ಎಲ್ಲವನ್ನು ಸೇರಿಸಿ ನುಣ್ಣಗೆ ರುಬ್ಬಬೇಕು. ಉಪ್ಪನ್ನು ಹಾಕ ಬೇಕು. ಊಟಕ್ಕೆ ಬಡಿಸುವ ಮೊದಲು ಮಜ್ಜಿಗೆ ಸೇರಿಸಿ ಒಣ ಮೆಣಸಿನ ಒಗ್ಗರಣೆ ಮಾಡಿ ತಂಬ್ಳಿಗೆ ಹಾಕಬೇಕು. ಇದು ತುಂಬಾ ರುಚಿಕರವಾಗಿರುತ್ತದೆ ಹಾಗೂ ಶರೀರವನ್ನು ತಂಪಾಗಿರಿಸುತ್ತದೆ.

ಕಾಡು ಕೊತ್ತಂಬರಿ ಸೊಪ್ಪಿನ ಚಟ್ನಿ

ಕಾಡು ಕೊತ್ತಂಬರಿ (*Haracleum hookerianum*) ಸೊಪ್ಪಿನ ಎಳೆಯ ಎಲೆಗಳನ್ನು ಆರಿಸಿ ತಂದು ಚೆನ್ನಾಗಿ ತೊಳೆದು ಹೆಚ್ಚಿಕೊಳ್ಳಬೇಕು. ನಂತರ ತೆಂಗಿನ ತುರಿ, ಜೀರಿಗೆ ಮೆಣಸು, ಹುಣಸೆ ಹುಳಿಯೊಂದಿಗೆ ಸೊಪ್ಪನ್ನು ಸೇರಿಸಿ ರುಬ್ಬಬೇಕು. ನಂತರ ಒಗ್ಗರಣೆ ಮತ್ತು ಉಪ್ಪನ್ನು ಹಾಕಬೇಕು. ಇದನ್ನು ಊಟ ಮತ್ತು ತಿಂಡಿ ಇವೆರಡರೊಡನೆ ಸೇವಿಸಬಹುದು.

ಚಗ್ತೆ ಸೊಪ್ಪು (ಚೊಕ್ಕಟೆ ಸೊಪ್ಪು) ಪಲ್ಯ

ಚೊಕ್ಕಟೆ ಸೊಪ್ಪು (*Cassia tora*) ಚಿಗುರಿರುವುದನ್ನು ಆರಿಸಿ ತಂದು ತೊಳೆದು ಹೆಚ್ಚಬೇಕು. ಬಾಣಲೆಯಲ್ಲಿ 1/4 ಲೋಟ ಎಣ್ಣೆಯನ್ನು ಹಾಕಿ, ಅರಿಶಿನ, ಸಾಸಿವೆ ಉದ್ದಿನ ಬೇಳೆ, ಕಡ್ಲೆ ಬೇಳೆಯನ್ನು ಹಾಕಿ ಹುರಿಯಬೇಕು. ಇದು ಹುರಿದಾದ ನಂತರ ಸೊಪ್ಪು ಮತ್ತು ಅಕ್ಕಿ ರವೆಯನ್ನು ಹಾಕಿ 10 ನಿಮಿಷದವರೆಗೆ ಹುರಿಯಿರಿ. ನಂತರ 2 ಲೋಟ ನೀರು ಹಾಕಿ ಬೇಯಿಸಬೇಕು. ನೀರು ಆರಿ ತಳ ಹಿಡಿಯದಂತೆ ನೋಡಿಕೊಳ್ಳಿ. ಮೆಣಸು, ಕಾಯಿ ತುರಿಯನ್ನು ಗಟ್ಟಿಯಾಗಿ ರುಬ್ಬಿ ಹಾಕಿ ಬೇಯಿಸಿ. ಕೊನೆಗೆ ಉಪ್ಪು ಹಾಕಿ ನಿಂಬೆ ಹಣ್ಣಿನ ರಸವನ್ನು ಸೇರಿಸಿ ಕೆಳಗಿಳಿಸಿ.

ಧೀರ್ಕದ ಹಣ್ಣಿನ ರಸದ ಗೊಜ್ಜು



ಬೆಳೆದು ನಿಂತ ಧೀರ್ಕದ ಹಣ್ಣಿನ ಮರ

ಧೀರ್ಕದ ಹಣ್ಣಿನ ಒಳಗಿರುವ ಗೊರಟನ್ನು ಹಿಂಡಿ ರಸವನ್ನು ತೆಗೆದಿಟ್ಟುಕೊಳ್ಳಬೇಕು (ಒಂದು ಲೋಟ ರಸ ಬೇಕಾಗುತ್ತದೆ). ನಂತರ ತೆಂಗಿನ ಕಾಯಿ ತುರಿ, ಜೀರಿಗೆ ಮೆಣಸು, ಬೆಲ್ಲ, ಉಪ್ಪು ಎಲ್ಲವನ್ನು ಸೇರಿಸಿ ರುಬ್ಬಬೇಕು. ಹಿಂಡಿದ ಹಣ್ಣಿನ ರಸದ ಜೊತೆಗೆ ಸೇರಿಸಬೇಕು. ಸಾಸಿವೆ ಒಗ್ಗರಣೆಯನ್ನು ಹಾಕಬೇಕು. ಇದು ಊಟಕ್ಕೆ ತುಂಬಾ ರುಚಿಯಾದುದಾಗಿದೆ.

ಅಪರೂಪದ ಸಾಧಕ 'ಡಾ. ಪ್ರಫುಲ್ಲ ಚಂದ್ರ'

ಭಗವಾನ್, ಶಿವಮೊಗ್ಗ

ಮಹಾಲಿಂಗಾಪುರದ ಸುತ್ತಮುತ್ತಲಿನ ರೈತರು ಸುಮಾರು ಇಪ್ಪತ್ತು ಕಿಲೋಮೀಟರ್‌ಗಳ ಅಂತರದಲ್ಲಿ ಸಾವಿರಾರು ಎಕರೆಯ ಕಬ್ಬಿನ ಗದ್ದೆಯಲ್ಲಿ ಸೋಗೆ ಸುಡದೆ ಹದಿನೇಳು ಹದಿನೆಂಟು ವರ್ಷಗಳು ಕೂಳೆಯಿಂದ ಸತತ ಕಬ್ಬಿನ ಕೃಷಿ ನಡೆಸುತ್ತಿರುವರು ಜೊತೆಗೆ, ಗದ್ದೆಯೊಳಗೆ ಅಧಿಕ ಬೇಸಾಯ ಕಾರ್ಯ ನಡೆಸದೆ "ಸೊನ್ನೆ ಹೂಡಿಕೆ"ಯ (zero cultivation) ಪದ್ಧತಿ ಕೂಡ ಅನುಸರಿಸುತ್ತಿರುವರು. ಸಾವಿರಾರು ಜನ ರೈತರ ಈ ರೀತಿಯ ವೆಚ್ಚ ಉಳಿಸುವ ಕೃಷಿಗೆ ಸ್ಫೂರ್ತಿ ನೀಡಿರುವವರು ದೇವಂಗಿ ಪ್ರಫುಲ್ಲಚಂದ್ರರವರು.

ಚೆನ್ನಗಿರಿ ಬಳಿಯ ಒಂದು ಸಣ್ಣ ಊರು ಮೋಡಗೊಂಡನ ಹಳ್ಳಿ. ಪ್ರತಿ ವರ್ಷ ಅಡಿಕೆ ಬೇಯಿಸಲು ಕಾಡಿಗೆ ನುಗ್ಗಿ ಸಾವಿರಾರು ಟನ್ ಸೌದೆಯನ್ನು ಲೂಟಿ ಹೊಡೆದು ಬೂದಿ ಮಾಡುತ್ತಿದ್ದ ಜನ ಈಗ ಅಡಿಕೆ ಬೇಯಿಸಲು ಕಾಡಿನ ಸೌದೆಯನ್ನು ಮುಟ್ಟುವುದಿಲ್ಲ. ಪ್ರಫುಲ್ಲಚಂದ್ರರ ಸುಧಾರಿತ ಅಡಿಕೆ ಕುಕ್ಕರ್ ಉಪಯೋಗಿಸಿ ಅಡಿಕೆ ಮರದಿಂದ ಬೀಳುವ ತ್ಯಾಜ್ಯದಲ್ಲೇ ಅಡಿಕೆ ಬೇಯಿಸುತ್ತಾರೆ. ಹಳ್ಳಿಗರು ಇಲ್ಲಿ 90 ಅಡಿಕೆಗರಿಯಲ್ಲಿ ಮೂರು ಗಂಟೆಯಲ್ಲಿ ಮೂರು ಕ್ವಿಂಟಾಲ್ ಅಡಿಕೆ ಬೇಯಿಸುತ್ತಿರುವರು. ಪ್ರತಿವರ್ಷ ಇದರಿಂದಾಗಿ ಲಕ್ಷಾಂತರ ಟನ್ ಮರಕಡಿತ ನಿಂತಿದೆ. ಹಳ್ಳಿಗೆ ಹಳ್ಳಿಯೇ ಬದಲಾಗಿದೆ. ಇದಕ್ಕೆ ಕಾರಣ ಪ್ರಫುಲ್ಲಚಂದ್ರರ ಸಂಶೋಧನೆ.

ಬೇಡದ್ದಕ್ಕೆಲ್ಲಾ ಕೂಡಲೇ ಬೆಂಕಿ ಇಡುವ ರೈತರ ಸುಡಗೇಡಿತನವನ್ನು ತಿದ್ದಿಕೊಂಡು, ಕೃಷಿ ತ್ಯಾಜ್ಯಗಳನ್ನು ಸತ್ವಯುತವಾಗಿ ಬಳಸಿಕೊಂಡಲ್ಲಿ ಅದರ ಪರಿಣಾಮ ಏನೆಂಬುದನ್ನು ದೇವಂಗಿ ಪ್ರಫುಲ್ಲಚಂದ್ರರ ಕೃಷಿ ಕ್ಷೇತ್ರಕ್ಕೆ ಸಂದರ್ಶನ ಮಾಡಿಯೇ ತಿಳಿದುಕೊಳ್ಳಬೇಕು. ಇದನ್ನು ಮನಗಂಡು ಅನುಸರಿಸಿದ ಯಾವುದೇ ರೈತರ ತೆಂಗು, ಅಡಿಕೆ ತೋಟಕ್ಕೆ ಹೋಗಿ ನೋಡಿದರೂ, ಅಲ್ಲಿ ಬೇಡದ ಗರಿ, ಹೆಡಮಟ್, ಅಡಿಕೆ ಸಿಪ್ಪೆ, ಬಾಳೆದಿಂಡು ಎಲೆಗಳು ಚೆಲ್ಲಿ ಬಿದ್ದು ಸಹಜ ಗೊಬ್ಬರವಾಗಿ ಭೂಮಿಯ ಫಲವತ್ತತೆ ಹೆಚ್ಚಿರುವುದನ್ನು ನೋಡಬಹುದು. ಈ ಹಿನ್ನೆಲೆಯಲ್ಲಿ ಪ್ರಫುಲ್ಲಚಂದ್ರರ ಪಾತ್ರ, ಶ್ರಮ ಅಪಾರ.



ಕಾಂಪೋಸ್ಟ್ ಗೊಬ್ಬರಕ್ಕೆ ಕೃಷಿಯಲ್ಲಿ ಮಹತ್ವದ ಸ್ಥಾನವಿದೆ. ಆದರೆ ಅದರ ತಯಾರಿಕೆಯಲ್ಲಾಗುವ ಅಧಿಕ ವೆಚ್ಚ ಮತ್ತು ಅದರಿಂದ ರೈತನ ಮೇಲಾಗುವ ಹೊರೆಯನ್ನು ಕಡಿಮೆ ಮಾಡುವತ್ತ ಯಾರೂ ಯೋಚಿಸಿರಲಿಲ್ಲ. ಈ ನಿಟ್ಟಿನಲ್ಲಿ ಚಿಂತಿಸಿದ ಪ್ರಫುಲ್ಲಚಂದ್ರರು ಸರಳ ಮಾರ್ಗ ಒಂದನ್ನು ತೋರಿಸಿಕೊಟ್ಟರು. ಪ್ರಫುಲ್ಲ ಚಂದ್ರರು ಮೊದಲಿಗೆ ತಮ್ಮ ವೃತ್ತಿಯಲ್ಲಿ ನಡೆಸಿದ ಸತತ ಚಿಂತನೆ, ಪ್ರಯೋಗಗಳಿಂದ "ಸಹಜ ವಿಜ್ಞಾನಿ"ಯಾದರು. ಇವರ ಎಲ್ಲ

> ***"ಇದ್ದುದನ್ನ ಇದ್ದಲ್ಲೇ ನಿಮ್ಮ ಗದ್ದೆಯಲ್ಲೇ ಬಿಡಿ. ನಮಗೊದಗಿರುವ ಸಮೃದ್ಧ ಬಿಸಿಲು, ಭೂಮಿಯೊಳಗಿರುವ ಕ್ರಿಮಿ ಕೀಟಗಳು, ವಾತಾವರಣ, ತೇವಾಂಶ ಎಲ್ಲವೂ ಸೇರಿ ಅದನ್ನು ಉತ್ತಮ ಗೊಬ್ಬರವಾಗಿಸುತ್ತದೆ. ದಟ್ಟಕಾಡನ್ನು ಒಮ್ಮೆ ಕಣ್ಣು ಬಿಟ್ಟು ನೋಡಿ, ಅದಕ್ಕೆ ಯಾರು ಗೊಬ್ಬರವಿತ್ತರು? ಕೃಷಿಯಲ್ಲಿ ಸಹಜತೆ, ಕಡಿಮೆ ಖರ್ಚು, ನಿಮ್ಮ ಸಮಯಕ್ಕೆ ಹೆಚ್ಚಿನ ಆದ್ಯತೆ ನೀಡಿ. ಸುಲಭವಾಗಿ ದೊರಕುವುದನ್ನು, ನಮ್ಮದನ್ನು, ಸರಿಯಾಗಿ ಬಳಸಿ, ಕೃಷಿ ದುಬಾರಿಯಾಗದು" ಎಂದು ಸಾರಿ ಹೇಳುತ್ತಿರುವ ಡಾ. ಪ್ರಫುಲ್ಲ ಚಂದ್ರರು ಸರಳ, ಸಹಜ ಕೃಷಿಯ ರೂವಾರಿಯಾಗಿರುವರು.***

ಪ್ರಯೋಗಗಳು ಪ್ರಯೋಗಾಲಯದಿಂದ ಭೂಮಿಗೆ (Lab to Land) ಬಂದದಲ್ಲ. ಬದಲಾಗಿ ಭೂಮಿಯಿಂದ ಭೂಮಿಗೆ ಹಾದು ಹೋಗಿರುವಂತಹವು. ಹಾಗಾಗಿ ಸಮಸ್ಯೆಗಳ ಮಹಾಪೂರವಿಲ್ಲ, ಎಲ್ಲವೂ ಸರಳ ಸುಲಭವಾದದ್ದು. ಸುತ್ತಮುತ್ತಲಲ್ಲಿ ಸಿಗುವ ವಸ್ತುಗಳ ಬಳಕೆಯಿಂದ ಇದು ಎಲ್ಲ ರೈತರ ಕೈ ಅಳತೆಗೆ ನಿಲುಕುವ ಆವಿಷ್ಕಾರಗಳಾಗಿವೆ. ಇವನ್ನು ನೋಡಿ, ಅನುಭವಿಸಿ, ಪ್ರಾಮಾಣೀಕರಿಸಿಕೊಂಡು ಲಾಭದಾಯಕವಾದರೆ ನೀವು ಅನುಸರಿಸಿ ಎಂದು ಇವರು ಒತ್ತಿ ಹೇಳುತ್ತಿರುವರು. ಇವರ ಸಾಧನೆಗಳು ಪೇಟೆಂಟಿಗಾಗಿ ಮಾಡಿದ ಅನುಶೋಧನೆಯಲ್ಲ ಎಲ್ಲರಿಗೂ ತೆರೆದಿಟ್ಟ ತಂತ್ರಜ್ಞಾನ. ಇವರ ಫಾರಂ ಒಂದು ಮುಕ್ತ ವಿಶ್ವವಿದ್ಯಾನಿಲಯ ಎಂದರೆ ತಪ್ಪಾಗಲಾರದು.

ಕೃಷಿ ಕ್ಷೇತ್ರದ ಸಣ್ಣ ಸಣ್ಣ ಸಮಸ್ಯೆಗಳಿಗೂ ತಲೆ ಕೆಡಿಸಿಕೊಂಡ ಇವರು ನಾವು ಮಾಡುವ ಒಂದು ಸಣ್ಣ ತಪ್ಪು ತಲೆತಲಾಂತರಗಳವರೆಗೆ ದುಷ್ಪರಿಣಾಮ ಬೀರುವುದು ಎನ್ನುತ್ತಾರೆ. ದೊಡ್ಡಪಾತ್ರೆಯ ಸಣ್ಣರಂಧ್ರವನ್ನು ಅಸಡ್ಡೆಮಾಡಿದರೆ ಅದು ಪಾತ್ರೆಯಲ್ಲಿರುವ ನೀರೆಲ್ಲವನ್ನು ಸೋರಿಸಿ ಬಿಡುತ್ತದೆ. ಇದೇ ಪ್ರಫುಲ್ಲ ಚಂದ್ರರ ಸರಳ ತತ್ವ. ಶ್ರಮ ಉಳಿಸಲು ಇವರು ನಿರ್ಮಿಸಿರುವ ನವೀನ ಮಾದರಿಯ ಕೊಟ್ಟಿಗೆಯಲ್ಲಿ ಗೋಡೆ ಕಿಂಡಿಯಿಂದ ನೇರವಾಗಿ ಸಗಣಿ, ಗಂಜಲ ಗೋಬರ್ ಗ್ಯಾಸ್ ಪಿಟ್ ತಲುಪುತ್ತದೆ.

ಕಬ್ಬಿನ ಕೃಷಿಯಲ್ಲಿ ಪ್ರಫುಲ್ಲಚಂದ್ರರು ಕೂಳೆ ಬೆಳೆಯಿಂದ ವಿಶ್ವ ದಾಖಲೆ ಮಾಡಿದ್ದಾರೆ. 1968ರಲ್ಲಿ ಸಿ.ಓ.740 ಕಬ್ಬಿನ ತಳಿ ನೆಟ್ಟು ಶೂನ್ಯ ಬೇಸಾಯ ಮಾಡಿ ಹೆಕ್ಟೇರಿಗೆ 125 ರಿಂದ 130 ಟನ್ ಇಳುವರಿ ಪಡೆದಿದ್ದು ಒಂದು ದಾಖಲೆ. ಜೊತೆಗೆ ಕಬ್ಬಿನ ರವದೆಯನ್ನು ಸುಡದೆ ಹರಡಿ ರಸಗೊಬ್ಬರದ ಬಳಕೆಯಲ್ಲಿ ಉಳಿತಾಯ ಮಾಡಿ ಲಘು ಪೋಷಕಾಂಶಗಳನ್ನು ಹೆಚ್ಚಾಗಿಸಿ, ಮಣ್ಣಿನ ಫಲವತ್ತತೆಯನ್ನು ಅಧಿಕಗೊಳಿಸಿ, ಕಳೆ ತೆಗೆಯುವ ಖರ್ಚನ್ನು ಉಳಿಸಿ, ಎರೆಹುಳುಗಳ ಸಂಖ್ಯೆ ಭೂಮಿಯಲ್ಲಿ ಹೆಚ್ಚಾಗುವುದನ್ನು ಸಾಬೀತು ಪಡಿಸಿದ ಇವರ ಪ್ರಯೋಗ ಕೃಷಿಕರಿಗೊಂದು ವರದಾನ. ಇದರಿಂದ ಪ್ರತಿ ವರ್ಷ ನಾಲ್ಕೂವರೆ ಟನ್ ಬೀಜ ಹಾಗೂ ಮಾನವ ಶ್ರಮವನ್ನು ಉಳಿತಾಯ ಮಾಡಿ ವಿಶ್ವ ಮಟ್ಟದಲ್ಲಿ ಈ ರೀತಿಯ ದೀರ್ಘ ಕೂಳೆ ಬೇಸಾಯವನ್ನು ಸಾಬೀತು ಮಾಡಿದ್ದಾರೆ.

ದೇವಂಗಿ ಪ್ರಫುಲ್ಲ ಚಂದ್ರರ ಕೃಷಿ ಫಾರಂನಲ್ಲಿ ಕಬ್ಬು, ತೆಂಗು, ಅಡಿಕೆ, ಕೋಕೋ, ಬಾಳೆ, ವೆನಿಲಾ, ಮೆಣಸು, ನೀಲಗಿರಿ, ಬಿದುರು, ತೇಗ ಎಲ್ಲಾ ಇವೆ.

ಇಷ್ಟಿದ್ದೂ ಕೃಷಿ ಕ್ಷೇತ್ರದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸುವ್ಯವಸ್ಥಿತವಾದ ರಸ್ತೆ ಇದ್ದು, ಇದರ ಇಕ್ಕೆಲಗಳಲ್ಲಿ ತೆಂಗನ್ನು ಕೂರಿಸಿ, ಬೀಳು ಭೂಮಿಯಲ್ಲಿ ಕೃಷಿಗೆ ಬೇಕಾಗುವ ಮರಮಟ್ಟುಗಳನ್ನು ನೀಡಬಲ್ಲ ಮರಗಳನ್ನು ಬೆಳೆದು, ಒಂದೊಂದು ಇಂಚನ್ನೂ ಸದುಪಯೋಗಪಡಿಸಿಕೊಳ್ಳಲಾಗಿದೆ.

ರೈತರಿಗೆ ಇವರು ಹೇಳುವ ಕಿವಿ ಮಾತೆಂದರೆ "ಕೃಷಿಯಲ್ಲಿ ದ್ರವರೂಪದ ಗೊಬ್ಬರ ಅಧಿಕ ಲಾಭದಾಯಕ. ಗಿಡ ಮರಗಳು ರಸ ಸಾರವನ್ನೇ ಅವಲಂಬಿಸಿ ಫಲ ನೀಡುವುದು. ಈ ಮರ್ಮವನ್ನು ಅರಿಯಿರಿ". ಒಬ್ಬ ಮನುಷ್ಯ ಪ್ರತಿದಿನ ಉಪಯೋಗಿಸಿ ಬಿಡುವ 80 ಲೀಟರ್ ನೀರು, ಒಂದು ದನದಿಂದ ಪ್ರತಿದಿನ ಹೊರಬರುವ ಗಂಜಲ, ಸಗಣಿ ಇವುಗಳನ್ನು ಸರಿಯಾಗಿ ಹಿಡಿದಿಟ್ಟು ಬಳಸಿದರೆ ನಿರಂತರವಾಗಿ ಆತನ ಕೃಷಿಗೆ ಉತ್ತಮ ಸಾವಯವ ದ್ರವರೂಪದ ಗೊಬ್ಬರ ಸಿಗುತ್ತದೆ ಎನ್ನುವ ಇವರು ತಮ್ಮ ತೋಟ ಗದ್ದೆಗಳಿಗೆ ತಮ್ಮ ಮನೆ, ಜನ, ಜಾನುವಾರುಗಳ ತ್ಯಾಜ್ಯವಸ್ತುಗಳನ್ನೇ ಸ್ಪ್ರಿಂಕ್ಲರ್ ಮೂಲಕ ತಲುಪಿಸುವ ರೀತಿ ಅನನ್ಯ. "ಕೃಷಿಕ ತನ್ನ ಜಮೀನಿನಲ್ಲಿರಬೇಕು. ತನ್ನ ಮನೆ ಗದ್ದೆಗಳನ್ನು ಯೋಜನಾ ಬದ್ಧವಾಗಿ ನಿರ್ಮಿಸಿಕೊಂಡರೆ ಇದೆಲ್ಲಾ ಸಾಧ್ಯ" ಎನ್ನುತ್ತಾರೆ.

"ನನ್ನ ನೋವು, ಶ್ರಮ, ನಷ್ಟ ನನಗೆ ಮಾತ್ರ ಇರಲಿ - ನನ್ನ ಆವಿಷ್ಕಾರಗಳಿಂದ ಉಂಟಾಗುವ ಲಾಭವೆಲ್ಲಾ ಕೃಷಿಕರಿಗಾಗಲಿ" ಎನ್ನುವ ಉದಾರ ಬುದ್ಧಿಯ ಇವರು ಇದುವರೆಗೆ ಸುಮಾರು ಎರಡು ಸಾವಿರದ ಇನ್ನೂರ ಇಪ್ಪತ್ತು ಗಂಟೆಗಳಷ್ಟು ಅವಧಿಯನ್ನು ತಮ್ಮ ಫಾರಂ ನೋಡಲು ಬಂದ ರೈತರು, ವಿಧ್ಯಾರ್ಥಿ, ವಿಜ್ಞಾನಿ ಹಾಗೂ ಇತರರಿಗೆ ತಮ್ಮ ಅನುಭವ, ಜ್ಞಾನಧಾರೆಯನ್ನೆರೆಯಲು ವಿನಿಯೋಗಿಸಿರುವುದು ಒಂದು ಜಾಗತಿಕ ದಾಖಲೆ. ಇದುವರೆಗೆ ಹತ್ತಾರು ಸಾವಿರ ಮಂದಿ ದೇಶ ವಿದೇಶಗಳಿಂದ ಬಂದು ಇವರ ಸಾಧನೆಯನ್ನು ವೀಕ್ಷಿಸಿ, ಪ್ರಭಾವಿತರಾಗಿದ್ದಾರೆಂಬುದನ್ನು ಮರೆಯುವಂತಿಲ್ಲ.

ಹೊಸ ಮಾದರಿಯ ಅಡಕೆ ಕುಕ್ಕರ್, ಡ್ರೈಯರ್‌ಗಳಲ್ಲದೆ ಕೃಷಿ ಕ್ಷೇತ್ರಕ್ಕೆ ಬಳಕೆಯಾಗುವ ಹಲವು ಯಂತ್ರಗಳು, ಕಲ್ಲು ಚಪ್ಪಡಿ ಕೂರಿಸುವ ಸಾಧನ, ಭೂಮಿಯೊಳಗೆ ಸುಲಭವಾಗಿ ನೀರಿನ ಪೈಪು ಕೂಡಿಸುವ ಸಾಧನ, ಹೀಗೆ ನೂರೆಂಟು ಸರಳ ಸುಲಭ ಆವಿಷ್ಕಾರಗಳನ್ನೇ ಕೊಟ್ಟಿರುವರು.

ಈ ಕೃಷಿ ಋಷಿ, ಕೃಷಿ ಕ್ಷೇತ್ರದಲ್ಲಿ ನಿರಂತರ ಸಂಶೋಧನೆ ನಡೆಸುತ್ತಲೇ ಸಾಗಿದ್ದಾರೆ. ತಮ್ಮ ಮಕ್ಕಳೂ ಇದೇ ಮಾರ್ಗದಲ್ಲಿ ಸಾಗಿರುವುದು ಅವರಿಗೆ ಹೆಮ್ಮೆಯ ಸಂಗತಿ.

ನೂರಾರು ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳು ಬಂದರೂ, ಹಲವಾರು ರಾಜ್ಯಮಟ್ಟದ ಸಮಿತಿಯ ಸದಸ್ಯರಾದರೂ ಬಿಡುವಿನ ಸಮಯವನ್ನೆಲ್ಲಾ ಕೃಷಿಗಾಗಿ ಮುಡುಪಿಟ್ಟ ಪ್ರಫುಲ್ಲ ಚಂದ್ರ ತಮ್ಮ ಈ ಇಳಿ ವಯಸ್ಸಿನಲ್ಲೂ ಸದಾ ಹಸನ್ಮುಖಿ. ಎಲ್ಲರೊಡನೆಯೂ ಆದರದಿಂದ ಮಾತನಾಡಿ ಉಪಚರಿಸುವ ಸ್ನೇಹಜೀವಿ. ಹಾಗಾಗಿಯೇ ನಿರಂತರ ವೀಕ್ಷಕರ ದಂಡು ಪ್ರಫುಲ್ಲಚಂದ್ರರ ಮನೆಗೆ. ಸಮಯ ಪರಿಪಾಲನೆ, ಹಿಡಿದ ಕೆಲಸವನ್ನು ಪೂರೈಸುವ ಛಲ, ಸಣ್ಣ ಸಣ್ಣ ವಿಷಯಗಳಿಗೂ ತಲೆಕೆಡಿಸಿಕೊಂಡು ಪರಿಹಾರ ಹುಡುಕುವ ರೀತಿ, ರೈತ ಸಮುದಾಯದ ನೋವು ನಲಿವಿಗೆ ಸ್ಪಂದಿಸುವ ಮನದಿಂದಾಗಿ - ಸೋಮಾರಿತನ ಅವರನ್ನು ಮುಟ್ಟಿಲ್ಲ. ವಯಸ್ಸಿನ ಪ್ರಭಾವ ಅವರ ಮೇಲಾಗಿಲ್ಲ. ಸರಳ ಜೀವನದ ಮಹತ್ತರ ಚಿಂತನೆಯ ಪ್ರಫುಲ್ಲ ಚಂದ್ರರಂತಹವರು ಅಪರೂಪ. ಇಂತಹವರು ರೈತ ಕುಲದ ಆಸ್ತಿ ಎಂದರೆ ತಪ್ಪಾಗದು.

ಪಾರಂಪರಿಕ ವೈದ್ಯ ಪದ್ಧತಿಯ ನಿಪುಣೆ: ಶ್ರೀಮತಿ ಮಾಸ್ತಮ್ಮ

ಸುಮಾರು 55 ವರ್ಷದ ಶ್ರೀಮತಿ ಮಾಸ್ತಮ್ಮನವರು, ಬಡ ಕುಟುಂಬಕ್ಕೆ ಸೇರಿದವರು. ಹೆರಿಗೆ ಮಾಡಿಸುವ ಕಾಯಕವನ್ನು ಮಾಡುತ್ತಾ ಅದರಲ್ಲೇ ತಮ್ಮ ಬದುಕಿನ ಸಾಫಲ್ಯತೆಯನ್ನು ಇವರು ಕಂಡು ಕೊಂಡಿದ್ದಾರೆ. ಚಿಕ್ಕ ವಯಸ್ಸಿನವರಾಗಿದ್ದಂದಿನಿಂದಲೂ ತಾಯಿಯವರು ತಾವು ಹೆರಿಗೆ ಮಾಡಿಸಲು ಹೋಗುವಾಗಲೆಲ್ಲಾ ಇವರನ್ನೂ ಕರೆದುಕೊಂಡು ಹೋಗುತ್ತಿದ್ದರಿಂದ ವಿವಾಹವಾಗುವ ವೇಳೆಗೆ ಮಾಸ್ತಮ್ಮ ಹೆರಿಗೆ ಮಾಡಿಸುವ ಕೆಲಸದಲ್ಲಿ ಪರಿಣತಿಯನ್ನು ಪಡೆದರು. ಜೊತೆಗೆ ಇವರ ತಾಯಿಯವರು ಕಾಯಿಲೆಗಳಿಗೆ ಔಷಧಿಗಳನ್ನು ಕೊಡುತ್ತಿದ್ದುದರಿಂದ ಇದರಲ್ಲೂ ಆಸಕ್ತಿ ವಹಿಸಿ ನಾಟೀ ವೈದ್ಯ ಪದ್ಧತಿಯನ್ನು ಕಲಿತರು. ಮೈ ಊತ ಬರುವ ರೇಷ್ಮೆ ಕಾಯಿಲೆಗೆ ಒಳ್ಳೆಯ ಔಷಧಿಯನ್ನು ನೀಡುತ್ತಿದ್ದರು. ಸುಮಾರು ಒಂದು ವಾರ ಔಷಧಿ ನೀಡುವುದರಲ್ಲಿ ಕಾಯಿಲೆ ಗುಣವಾಗುತ್ತಿತ್ತು. ಇದಲ್ಲದೆ ಸ್ತ್ರೀಯರ ರೋಗಗಳಿಗೆ, ಮಕ್ಕಳಿಗೆ ಬರುವ ರೋಗಗಳಿಗೂ ಔಷಧಿಗಳನ್ನು ನೀಡಿ ಗುಣ ಪಡಿಸುತ್ತಿದ್ದರು. ಮಕ್ಕಳಾಗದಿದ್ದ ಅನೇಕ ಮಹಿಳೆಯರಿಗೆ ಗಿಡಮೂಲಿಕೆ ಔಷಧಿ ನೀಡಿ ಮಕ್ಕಳು ಪಡೆಯುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಈ ಕೆಲಸ ಅವರ ಜೀವನಾಧಾರವಾಗಿದ್ದರೂ ಯಾವ ರೋಗಿಗೂ ಇಂತಿಷ್ಟೇ ಹಣ ಕೊಡಬೇಕೆಂದು ಒತ್ತಾಯಿಸುತ್ತಿರಲಿಲ್ಲ. ಹೆಚ್ಚಿನ ರೋಗಿಗಳು ಬಡವರಾದುದರಿಂದ ಸಂತೋಷದಿಂದ ಅವರು ಕೊಟ್ಟಿದ್ದರಲ್ಲಿಯೇ ತೃಪ್ತಿ ಪಟ್ಟುಕೊಳ್ಳುತ್ತಾರೆ.

ಶ್ರೀಮತಿ ಮಾಸ್ತಮ್ಮನವರು ಹಲವು ಬಗೆಯ ಹುಲ್ಲುಗಳು ಮೊದಲಾಗಿ ಸುಮಾರು ಐದುನೂರು ಗಿಡಮೂಲಿಕೆಗಳನ್ನು ಹೆಸರಿಸಬಲ್ಲವರಾಗಿರುತ್ತಾರೆ. ತಮಗೆ ಬೇಕಾದ ಗಿಡಮೂಲಿಕೆಗಳನ್ನು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದಲೇ ತರುತ್ತಿದ್ದರು. ಆದರೆ ಈಗ ಸರ್ಕಾರ ಅವರನ್ನು ಅರಣ್ಯಕ್ಕೆ ಪ್ರವೇಶಿಸಲು ಬಿಡುತ್ತಿಲ್ಲ. ಇದರಿಂದಾಗಿ ಸೂಕ್ತ ಗಿಡಮೂಲಿಕೆಗಳು ದೊರೆಯದೆ ಔಷಧಿ ಸಿದ್ಧಪಡಿಸಲು ಕಷ್ಟವಾಗುತ್ತಿದೆ. ಇವರುಗಳ ಮೇಲೆ ಅರಣ್ಯ ಇಲಾಖೆಯವರು ಅನೇಕ ಕೇಸುಗಳನ್ನೂ ಸಹ ಹಾಕಿದ್ದಾರೆ.

ಈ ಇಳಿ ವಯಸ್ಸಿನಲ್ಲೂ ಅವರು ಹದಿನಾರು ಜನ ಸ್ಥಳೀಯ ನಾಟಿ ವೈದ್ಯರನ್ನು ಸೇರಿಸಿ ಸಂಘವನ್ನು ಸ್ಥಾಪಿಸಿರುತ್ತಾರೆ. ಈ ಸಂಘದಲ್ಲಿ ಪ್ರತಿನಿತ್ಯ ಔಷಧೀಯ ಗಿಡಮೂಲಿಕೆಗಳನ್ನು ಕುರಿತು ವಿಮರ್ಶೆ ಮಾಡಲಾಗುತ್ತದೆ. ಇದೇ ಔಷಧಿಗಳನ್ನು ನೀಡಿ ರೋಗಗಳನ್ನು ಗುಣಪಡಿಸಲಾಗುತ್ತದೆ. ಇದುವರೆಗೆ ಇವರ ಕುಟುಂಬದವರು ಒಂದು ಇಂಜಕ್ಷನ್ನನ್ನು ಕೂಡ ತೆಗೆದುಕೊಂಡಿರುವುದಿಲ್ಲ.

ಮಹಿಳಾ ಸಂಘಕ್ಕೆ ಹತ್ತು ಎಕರೆ ಭೂಮಿ ಕೊಟ್ಟರೆ ಇದರಲ್ಲಿ ಔಷಧಿವನ ಬೆಳೆಸುತ್ತೇವೆ ಎನ್ನುವ ನಾಟಿ ವೈದ್ಯೆ ಮಾಸ್ತಮ್ಮ, ಯಾರು ಏನೇ ಕಷ್ಟ ಕೊಟ್ಟರೂ ಕಾಡನ್ನು ಬಿಡುವುದಿಲ್ಲ ಎನ್ನುತ್ತಾರೆ. ಇವರ ಸೇವೆಯನ್ನು ಗುರುತಿಸಿ ಇನ್ಸರ್ಟ್ (INCERT: Institute for Natural Resources Conservation, Education, Reserach and Training) ಸಂಸ್ಥೆಯು ಸನ್ಮಾನಿಸಿದೆ. 5,000 ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಿ ದಿನಾಂಕ 28.05.2002 ರಂದು, ಕರ್ನಾಟಕ ಗ್ರಾಮಾಭಿವೃದ್ಧಿ ಸಂಸ್ಥೆಗಳ ಒಕ್ಕೂಟದ ಎರಡನೇ ದಶವಾರ್ಷಿಕ ಸಮಾರಂಭದ ಸಂದರ್ಭದಲ್ಲಿ ಸನ್ಮಾನಿಸಲಾಗಿರುತ್ತದೆ.

ಚಂದ್ರಮೋಹನ್ ಸೋನ್ಸ್‌ರ ಅದ್ಭುತ ತೋಟ

ಮೂಡಬಿದಿರೆಯ ಚಂದ್ರಮೋಹನ್ ಸೋನ್ಸ್ ತೋಟವು ಬೆಳೆ ಉತ್ಪಾದಿಸುವ ಮಾಮೂಲಿ ತೋಟವಾಗಿರದೆ, ಒಂದು ಶೈಕ್ಷಣಿಕ ಸಂಸ್ಥೆಯಂತೆ ಗೋಚರಿಸುತ್ತದೆ. ಈ ತೋಟವು ಹಲವಾರು ಹಣ್ಣಿನ ಗಿಡಗಳಿಗೆ, ಅನೇಕಾನೇಕ ಔಷಧೀಯ ಮತ್ತು ಪುಷ್ಪ ಗಿಡಗಳಿಗೆ ಹೆಸರಾಗಿದೆ. ಹೊಲದಿಂದ ಪ್ರಯೋಗಾಲಯದೆಡೆಗೆ ಕೃಷಿ ಸಾಗಬೇಕೆಂದು ಬಯಸುವ ಡಾ. ಎಲ್.ಸಿ. ಸೋನ್ಸ್‌ರವರು ತಮ್ಮ ಹೊಲವನ್ನು ಒಂದು ಮುಕ್ತ ಕೃಷಿ ಶಾಲೆಯಂತೆ ಬೆಳೆಸುತ್ತಿದ್ದಾರೆ. ಇವರ ತೋಟದಲ್ಲಿ ಪ್ರಕೃತಿ ಮಾತೆಯು ಜೀವ ವೈವಿಧ್ಯದಿಂದ ಕಂಗೊಳಿಸುತ್ತಾಳೆ. ಎಲ್ಲವೂ ಸಮತೋಲನದಲ್ಲಿರುವ ಸಂತೃಪ್ತಿ ಇಲ್ಲಿ ಎದ್ದು ಕಾಣುತ್ತದೆ. ಮಂಗಳೂರಿನಿಂದ ಕಾರ್ಕಳಕ್ಕೆ ಹೋಗುವ ಮಾರ್ಗದಲ್ಲಿ 36 ಕಿ.ಮೀ. ದೂರದಲ್ಲಿರುವ "ಸೋನ್ಸ್ ತೋಟ"ವು ಇವರಲ್ಲಿ ಕೃಷಿ ಬಗ್ಗೆ ಇರುವ ದೃಷ್ಟಿಕೋನವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಯಾವುದಾದರು ಹೊಸ ಬಗೆಯ ಹಣ್ಣು ಅಥವಾ ಹೊಸ ಗಿಡದ ಬಗ್ಗೆ ಇವರು ಎಲ್ಲಾದರು ಕೇಳಿದರೆ, ಅದರ ಮೂಲ ಹುಡುಕಿ, ಬೀಜ ತಂದು ತಮ್ಮ ತೋಟದಲ್ಲಿ ಬಿತ್ತಿ, ಬೆಳೆಯುವವರೆಗೆ ಸೋನ್ಸ್‌ರವರಿಗೆ ನೆಮ್ಮದಿ ಇರದು. ಸಸ್ಯಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿ, ಅಮೆರಿಕಾದಲ್ಲಿ ಸಂಶೋಧನೆ ನಡೆಸಿ 1966ರಲ್ಲಿ ಡಾಕ್ಟರೇಟ್ ಪದವಿ ಪಡೆದ ಸೋನ್ಸ್‌ರವರು, ಉತ್ತಮ ಉದ್ಯೋಗ ಅವಕಾಶಗಳಿದ್ದರೂ ಮಣ್ಣಿನ ವಾಸನೆಗೆ ಮಣಿದು ಬೇಸಾಯಕ್ಕೆ ಶರಣಾದರು.

ಡಾ. ಸೋನ್ಸ್‌ರವರ ಪೂರ್ವಿಕರು ಈ ಭೂಮಿಯನ್ನು ಬೆಸೆಲ್ ಎಂಬ ಮಿಷಿನರಿಯವರಿಗೆ ತೋಟಗಾರಿಕ ಬೆಳೆಗಳಲ್ಲಿ ಪ್ರಯೋಗ ನಡೆಸಲು ಗುತ್ತಿಗೆ ಕೊಟ್ಟಿದ್ದರಂತೆ. ಆಗ ಅವರು ಅನಾನಸ್ ಬೆಳೆಯನ್ನು ಲಾಭದಾಯಕ ಬೆಳೆಯನ್ನಾಗಿ ನೆಟ್ಟರು. ಹೀಗೆ 60 ವರ್ಷಗಳ ಹಿಂದೆ ಈ ತೋಟಕ್ಕೆ ಪರಿಚಯಿಸಲ್ಪಟ್ಟ ಅನಾನಸ್ ಬೆಳೆ ಇಂದು 30 ಎಕರೆಗೂ ಹೆಚ್ಚು ಪ್ರದೇಶವನ್ನು ಆವರಿಸಿದೆ. ಹಾಗಾಗಿ 1930ರಿಂದ ಸೋನ್ಸ್ ತೋಟದಲ್ಲಿ ಅನಾನಸ್ ಒಂದು ಪ್ರಮುಖ ತೋಟಗಾರಿಕ ಬೆಳೆಯಾಗಿದೆ. ದೇಶದ ವಿವಿಧ ಭಾಗಗಳಿಗೆ ಈ ತೋಟದಿಂದ ಅನಾನಸ್ ಸಸಿಗಳ ರವಾನೆಯಾಗುತ್ತದೆ. ಡಾ. ಸೋನ್ಸ್‌ರವರು ಅನಾನಸ್ ಸಂಸ್ಕರಣೆ ಘಟಕವನ್ನು ತೋಟದಲ್ಲಿ ಸ್ಥಾಪಿಸಿದ್ದಾರೆ.

ದಕ್ಷಿಣ ಕನ್ನಡದ ಅನೇಕ ಆಸಕ್ತ ರೈತರಿಗೆ ಡಾ. ಸೋನ್ಸ್‌ರವರು ಹಣ್ಣಿನ ಬೆಳೆಗಳನ್ನು ಬೆಳೆಯುವ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತಾರೆ. ನಮ್ಮ ದೇಶದ ಸಾಂಪ್ರದಾಯಿಕ ಬೆಳೆಗಳೊಂದಿಗೆ ಇತರೆ ದೇಶದ ವಿವಿಧ ಹಣ್ಣಿನ ಗಿಡಗಳನ್ನೂ ಡಾ. ಸೋನ್ಸ್‌ರವರು ಬೆಳೆಯುತ್ತಿದ್ದಾರೆ. ಇವರ ತೋಟದಲ್ಲಿ ಬಹುತೇಕ ಎಲ್ಲಾ ತರಹದ ಹಣ್ಣಿನ ಬೆಳೆಗಳನ್ನು ಮತ್ತು ಸಾಂಬಾರು ಬೆಳೆಗಳನ್ನು ನೋಡಬಹುದು. ಪ್ರತಿಯೊಂದು ಗಿಡದ ಬಗ್ಗೆ, ವಿವಿಧ ತಳಿಗಳ ಬಗ್ಗೆ ಡಾ. ಸೋನ್ಸ್‌ರವರಿಗಿರುವ ಜ್ಞಾನ ಅದ್ವಿತೀಯವಾದದ್ದು. ಮರಗಿಡಗಳ ಬಗ್ಗೆ ಅವರಿಗಿರುವ ಕಾಳಜಿ ಎಂತಹವರನ್ನೂ ಬೆರಗುಗೊಳಿಸುತ್ತದೆ.

ಸೋನ್ಸ್‌ರವರು, ರಜಾ ದಿನಗಳಲ್ಲಿ ಶಾಲಾ ಕಾಲೇಜು ಮಕ್ಕಳಿಗೆ ಕೃಷಿ ಪಾಠವನ್ನು ಏರ್ಪಡಿಸುತ್ತಾರೆ. ಕೃಷಿ ಸಂಶೋಧನೆ ಮಾಡುವವರಿಗಂತೂ ಸೋನ್ಸ್ ತೋಟದಲ್ಲಿ ಸದಾ ಮುಕ್ತ ಅವಕಾಶ.

ಸೋನ್ಸ್ ತೋಟದಲ್ಲಿ ನೈಸರ್ಗಿಕ ಸಮತೋಲನವಿದೆ. ನಾನಾ ತರದ ಗಿಡಗಳು, ಮರಗಳು, ಚಿಟ್ಟೆ, ಪಕ್ಷಿಗಳ ಸಮ್ಮಿಲನವನ್ನು ಈ ತೋಟದಲ್ಲಿ ಕಾಣಬಹುದು. ಸಮಗ್ರ ಕೀಟ ನಿಯಂತ್ರಣ, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರದ ಬಳಕೆಯಿಂದ ಸಾಧ್ಯವಾದಷ್ಟು ಮಟ್ಟಿಗೆ ಸೋನ್ಸ್‌ರವರ ತೋಟ ರಾಸಾಯನಿಕಗಳಿಂದ ದೂರ ಸರಿಯುತ್ತಿದೆ. ಈ ತೋಟದ ಮತ್ತೊಂದು ಆಕರ್ಷಣೆ ಎಂದರೆ, ಗ್ರಾಮೀಣ ಜನರು ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ವಿವಿಧ ಗೃಹ ಬಳಕೆ ವಸ್ತುಗಳು, ಕೃಷಿ ಉಪಕರಣಗಳು ಮತ್ತು ಮಣ್ಣಿನ ಬಿದಿರಿನ ಬೀಜ ಶೇಖರಣ ಪಾತ್ರೆಗಳ ವಸ್ತು ಸಂಗ್ರಹಾಲಯವಿರುವುದು.

ಮೂಲ: ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, ಧಾರವಾಡ

ಉಪಯುಕ್ತ ಎಲೆಕ್ಟ್ರಾನಿಕ್ಸ್ ಸಂವಹನ ಧಾರೆಗಳು

1. ರೈತ ಪರ ವಿಚಾರಗಳಿಗೆ ಶಿವರಾಂ ಮತ್ತು ಅನಿತಾ ಪೈಲೂರರ ಉಸ್ತುವಾರಿಯಲ್ಲಿ "caam@sifij.com", ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, ಧಾರವಾಡ.

2. ಜಾಗತೀಕರಣ, ಜೈವಿಕ ತಂತ್ರಜ್ಞಾನಗಳ ಬಗ್ಗೆ ತೀಕ್ಷ್ಣ ವಿಮರ್ಶಾತ್ಮಕ ಲೇಖನಗಳು ಮತ್ತು ಆಹಾರದ ಬಗೆಗಿನ ರಾಜಕೀಯ ಅರ್ಥಶಾಸ್ತ್ರಕ್ಕೆ ಪ್ರಖ್ಯಾತ ಪತ್ರಕರ್ತ ದೇವೆಂದರ್ ಶರ್ಮ ನೇತೃತ್ವದ "Ag.Bio India@agbioindia.org" ಜೈವಿಕ ತಂತ್ರಜ್ಞಾನ ಮತ್ತು ಆಹಾರ ಭದ್ರತೆಗಳಿಗಾಗಿ ವೇದಿಕೆ, ನವದೆಹಲಿ.

ಪ್ರೊ. ಗುಪ್ತಾರ ಸಾರಥ್ಯದಲ್ಲಿ

1. ಸೃಷ್ಟಿ (SRISTI) ಯ ಚಟುವಟಿಕೆಗಳ ಬಗ್ಗೆ www.sristi.org

2. ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ (NIF) ವಿವರಗಳಿಗೆ www.nifindia.org

3. ಅನುಶೋಧನೆಗಳ ಡೇಟಾಬೇಸ್ (Data base) www.sristi.org/knownetgrin.html

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ, ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ವಸುಧ

ಬಾಲ ಸಾಹಿತ್ಯದಲ್ಲಿ ಮನೆ ಮಾತಾಗಿರುವ ಚಂದಮಾಮ ಪತ್ರಿಕಾ ಬಳಗವು 'ವಸುಧಾ' ಎನ್ನುವ ಕಿರು ಹೊತ್ತಿಗೆಯನ್ನು ಹೊರ ತಂದಿದೆ.

ಜೀವ ವಿವಿಧತೆ, ನೈಸರ್ಗಿಕ ಸಮತೋಲನ, ಪ್ರಕೃತಿಯ ವಿವಿಧ ವಿಸ್ಮಯಗಳ ಬಗ್ಗೆ ಮಕ್ಕಳಿಗೆ ಮನಮುಟ್ಟುವಂತೆ, ಅನೇಕ ಸರಳ ಉದಾಹರಣೆ ಮತ್ತು ಚಿತ್ರಗಳಿಂದ ಈ ಹೊತ್ತಿಗೆಯಲ್ಲಿ ತಿಳಿಸಲಾಗಿದೆ. ಮಕ್ಕಳಲ್ಲಿ ಪ್ರಕೃತಿಯ ಅಳಿವು, ಉಳಿವಿನ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು ಈ ಪುಸ್ತಕದ ಮೂಲಕ, ಚಂದಮಾಮ ಪುಸ್ತಕ ಬಳಗ ಮಾಡಿದೆ.

ವಸುಧ ಪುಸ್ತಕವು ಜೀವ ವಿವಿಧತೆಯನ್ನು ವಿವರಿಸುತ್ತಾ ಅದನ್ನು ಸಂರಕ್ಷಿಸುವ ಮಾರ್ಗಗಳ ಕಡೆಗೆ ಬೆಳಕು ಚೆಲ್ಲುತ್ತದೆ. ಅಪರೂಪದ ಮತ್ತು ಅತಿಮುಖ್ಯವಾಗಿರುವ ಗಿಡಗಳ, ಪಕ್ಷಿ ಮತ್ತು ಪ್ರಾಣಿಗಳನ್ನು ವಸುಧ ಪರಿಚಯಿಸುತ್ತದೆ. ಜೀವ ವೈವಿಧ್ಯದ ರಕ್ಷಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಅನೇಕ ವ್ಯಕ್ತಿಗಳ ಪರಿಚಯ ಈ ಪುಸ್ತಕದಿಂದ ಆಗುತ್ತದೆ.

ನ್ಯಾಷನಲ್ ಫೌಂಡೇಶನ್ ಪೋರ್ ಇಂಡಿಯ
ಕೂರ್ ಯುಜಿ ಪ್ಲೋರ್, ಇಂಡಿಯ ಹ್ಯಾಬಿಟಾಟ್ ಸೆಂಟರ್,
ಲೇಡಿ ರೋಡ್, ಹೊಸ ದೆಹಲಿ - 110 003

ಕೃಷಿ ಕ್ಷೇತ್ರದಲ್ಲಿ ಸಾಧನೆ

'ನನ್ನ ಅನುಭವ ನಿಮಗಾಗಿ' ಎಂಬ ಮುನ್ನುಡಿಯೊಂದಿಗೆ ಪ್ರಾರಂಭವಾಗುವ, ಈ ಪುಸ್ತಕ, ಡಾ. ದೇವಂಗಿ. ಆರ್. ಪ್ರಫುಲ್ಲ ಚಂದ್ರರವರ ಮತ್ತು ಅವರ ಕೃಷಿ ಪದ್ಧತಿಯ ಪರಿಚಯ ಮಾಡಿಕೊಡುತ್ತಾ ಸಾಗುತ್ತದೆ. ಈವರೆಗೆ, ಪ್ರಫುಲ್ಲಚಂದ್ರರು ಜಿಲ್ಲಾ ಮಟ್ಟದಿಂದ, ರಾಷ್ಟ್ರಮಟ್ಟದವರೆಗೆ ಪಡೆದಿರುವ ವಿವಿಧ ಬಹುಮಾನಗಳ, ಪ್ರಶಸ್ತಿಗಳ ವಿವರಣೆಯೊಂದಿಗೆ, ಕೃಷಿ ಕ್ಷೇತ್ರದಲ್ಲಿ ಅವರ ಚಿಂತನೆಗಳೆಡೆ ಈ ಪುಸ್ತಕ ಬೆಳಕು ಚೆಲ್ಲುತ್ತದೆ.

ಪ್ರಫುಲ್ಲ ಚಂದ್ರರ ಕೃಷಿ ಕ್ಷೇತ್ರದಲ್ಲಿನ ಪ್ರಯೋಗಗಳ ಬಗ್ಗೆ, ಅವರು ಅನುಸರಿಸುತ್ತಿರುವ ಕೂಳೆ ಕಬ್ಬಿನ ನಿರ್ವಹಣೆಯ ಮುಖ್ಯಾಂಶಗಳ ಬಗ್ಗೆ, ಕಬ್ಬು ಬೆಳೆಗಾರರಿಗೆ ವಿವರವಾದ ಅನೇಕ ಮಾರ್ಗದರ್ಶನಗಳ ಬಗ್ಗೆ, ಕೃಷಿಯಲ್ಲಿ ಸಾವಯವ ಗೊಬ್ಬರದ ಅವಶ್ಯಕತೆ ಮತ್ತು ಬಳಕೆಯ ಬಗ್ಗೆ ಈ ಪುಸ್ತಕ ವಿವರಣೆ ನೀಡುವುದಲ್ಲದೆ, ಅಡಿಕೆ ಸಂಸ್ಕರಣೆಯ ನವೀನ ವಿಧಾನದ ಬಗ್ಗೆಯೂ ವಿವರವಾದ ಮಾಹಿತಿ ನೀಡಲಾಗಿದೆ. ಪ್ರಫುಲ್ಲ ಚಂದ್ರರು ಅನ್ವೇಷಿಸಿರುವ ಹಲವಾರು ಅನ್ವೇಷಣೆಗಳ ಮತ್ತು ಕೃಷಿ ಯಂತ್ರೋಪಕರಣಗಳ ಮಾಹಿತಿ ಹಾಗು ಕೃಷಿಯಲ್ಲಿ ಅವುಗಳ ಪ್ರಯೋಜನಗಳ ಬಗ್ಗೆ ಈ ಪುಸ್ತಕ ವಿವರಿಸುತ್ತದೆ.

ಲೇ: ಡಾ. ದೇವಂಗಿ ಆರ್. ಪ್ರಫುಲ್ಲಚಂದ್ರ
ಪ್ರ: ದೇವಂಗಿ ಕೃಷಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,
ಬಿ-6, ಎ.ಪಿ.ಎಂ.ಸಿ. ಆವರಣ, ಶಿವಮೊಗ್ಗ - 577 204
ಬೆ. ರೂ. 10/-

ಹೀಗೊಂದು ಕೃಷಿ ಸಂಹಿತೆ

ಸರ್ ಅಲ್ಬರ್ಟ್ ಹೋವರ್ಡ್‌ರವರ ಮೂಲ ಕೃತಿಯ ಸರಳಾನುವಾದವೇ 'ಹೀಗೊಂದು ಕೃಷಿ ಸಂಹಿತೆ'. ಅಲ್ಬರ್ಟ್ ಹೋವರ್ಡ್ ಅವರು ಮಣ್ಣಿನ ಮತ್ತು ಮಾನವನ ರೋಗಗಳೆರಡು ಒಂದೇ ಪ್ರಕ್ರಿಯೆಯ ಭಾಗಗಳೆಂದು ನಂಬಿ ಎಪ್ಪತ್ತು ವರ್ಷಗಳ ಹಿಂದೆ ಭಾರತದಲ್ಲಿ ನಡೆಸಿದ ಪ್ರಯೋಗಗಳನ್ನಾಧರಿಸಿದ ಈ ಪುಸ್ತಕದಲ್ಲಿ ಅದನ್ನು ಹಂತ ಹಂತವಾಗಿ ತೋರಿಸಿಕೊಟ್ಟಿದ್ದಾರೆ.

ಮಣ್ಣಿನ ಫಲವತ್ತತೆಗೆ ಹೆಚ್ಚು ಒತ್ತು ನೀಡಿರುವ ಈ ಪುಸ್ತಕದಲ್ಲಿ ವಿಚಾರವನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಮಣ್ಣಿನ ಫಲವತ್ತತೆಯ ಸ್ವರೂಪ ಹಾಗು ಮಣ್ಣಿನ ಫಲವತ್ತತೆಯ ಪುನರುಜ್ಜೀವನವನ್ನು ವಿವರಿಸುತ್ತಾ, ಎರಡನೆಯ ಭಾಗದಲ್ಲಿ ಇಂದೂರು ವಿಧಾನದಲ್ಲಿ ಪಸೆ ಗೊಬ್ಬರ ತಯಾರಿಕೆ ಬಗ್ಗೆ ಹಾಗೂ ಇಂದೂರು ವಿಧಾನದ ಪ್ರಾಯೋಗಿಕ ಅಳವಡಿಕೆಯ ಮಾಹಿತಿ ನೀಡಲಾಗಿದೆ. ಮೂರನೆಯ ಭಾಗದಲ್ಲಿ ಕೃಷಿಯಲ್ಲಿನ ಆರೋಗ್ಯ, ಅಸ್ವಸ್ಥತೆ ಮತ್ತು ರೋಗ ವಿಭಾಗದಲ್ಲಿ ಅನೇಕ ಮಣ್ಣಿನ ರೋಗಗಳ ಬಗ್ಗೆ ಹಾಗು ರೋಗ ಚಿಕಿತ್ಸೆ ಬಗ್ಗೆ ವಿವರಣೆ ನೀಡಲಾಗಿದೆ. ನಾಲ್ಕನೆಯ ಭಾಗದಲ್ಲಿ ಇಂದಿನ ಕೃಷಿ ಸಂಶೋಧನೆಯ ವಿಮರ್ಶೆ ಹಾಗು ಸಾರ್ಥಕ ಕೃಷಿ ಸಂಶೋಧನೆಯ ಒಂದು ನಿದರ್ಶನವನ್ನು ನಮ್ಮ ಮುಂದಿಡುತ್ತಾ, ಅಂತಿಮ ಭಾಗದಲ್ಲಿ ಬಂಗಾಳದ ಚಹಾ ತೋಟವೊಂದರಲ್ಲಿ ಗೊಬ್ಬರ ತಯಾರಿಕೆಯ ಅನುಭವವನ್ನು ಲೇಖಕರು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

ಸಾವಯವ ಕೃಷಿಕರಿಗೆ ಈ ಪುಸ್ತಕ ಒಂದು ಉತ್ತಮ ಮಾರ್ಗದರ್ಶಿ ಹೊತ್ತಿಗೆಯಾಗಿರುತ್ತದೆ.

ಬೆಲೆ ರೂ.90/-
ಲೇ: ಅಲ್ಬರ್ಟ್ ಹೋವರ್ಡ್, ಅನುವಾದ: ವಾಲ್ಮೀಕಿ ಶ್ರೀನಿವಾಸ ಆಯ್ಯಂಗಾರ್
ಪ್ರ: ಇತರೆ ಕರ್ನಾಟಕ ಪುಸ್ತಕ ಕೇಂದ್ರ, ಸಂಸ್ಕೃತಿ, # 22, ಮೈಕೆಲ ಪಾಳ್ಯ
ಹೊಸತಿಪ್ಪಸಂದ್ರ (ಅಂಚೆ), ಬೆಂಗಳೂರು - 560 075

ಸಾಗುವಳಿ

ತಾಳಿ ಬಾಳುವ ಬೇಸಾಯ ಮತ್ತು ಸಂಪನ್ಮೂಲ ಹಕ್ಕುಗಳಿಗೆ ಮೀಸಲಾಗಿರುವ ಈ ಪತ್ರಿಕೆಯು ರೈತರಿಗೆ ಸಾವಯವ ಕೃಷಿ ಬಗ್ಗೆ ಸಮರ್ಪಕ ಬೇಸಾಯ ಪದ್ಧತಿಗಳ ಬಗ್ಗೆ ಮತ್ತು ಕೃಷಿ ವಿದ್ಯಾಮಾನಗಳ ಬಗ್ಗೆ ವಿವರಣೆ ನೀಡುತ್ತಾ ರೈತರ ಅಭಿವೃದ್ಧಿಗೆ ಸಹಾಯ ಮಾಡುವ ಉದ್ದೇಶವನ್ನು ಹೊಂದಿರುತ್ತದೆ. ಇಕ್ರಾ ಸಂಸ್ಥೆಯ ಗೆಳೆಯರು ಈ ಪತ್ರಿಕೆಯನ್ನು ಹೊರ ತರುತ್ತಿರುವರು.

<u>ಚಂದಾ ವಿವರ</u>	<u>ವಿಳಾಸ:</u>
ಬಿಡಿ ಪ್ರತಿ: ರೂ.15/-	ನಂ. 22, 5ನೇ ಕ್ರಾಸ್, ಮೈಖೇಲ್ ಪಾಳ್ಯ
ವಾರ್ಷಿಕ: ರೂ.75/-	2ನೇ ಹಂತ, ಹೊಸ ತಿಪ್ಪಸಂದ್ರ ಅಂಚೆ
ಸಂಸ್ಥೆಗಳು: ರೂ.150/-	ಬೆಂಗಳೂರು - 560 075

ಬೆಂಗಳೂರು ಪರಿಸರ ಶಿಕ್ಷಣ ಕೇಂದ್ರವು ಭಾರತೀಯ ಭಾಷೆಗಳಲ್ಲೇ ವಿಸ್ತೃತವಾದ, ಪರಿಸರದ ಸಮಗ್ರ ಚಿತ್ರಣವನ್ನು ಕೊಡುವ ಇಂಗ್ಲೀಷ್ ಮತ್ತು ಕನ್ನಡದ ದ್ವಿ ಭಾಷಾ ಅರ್ಥಕೋಶ ಒಂದನ್ನು ಹೊರ ತಂದಿದೆ. ಇಚ್ಛೆಯುಳ್ಳವರು ಪ್ರತಿಗಳಿಗಾಗಿ ಪರಿಸರ ಶಿಕ್ಷಣ ಕೇಂದ್ರ, ದಕ್ಷಿಣ ವಲಯ ಘಟಕ, ಕಮಲಾ ಮ್ಯಾನ್‌ಷನ್, 143, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು- 560001 ಈ ವಿಳಾಸವನ್ನು ಸಂಪರ್ಕಿಸಬಹುದು. ಬೆಲೆ ರೂ. 650/-

ಎರೆಗೊಬ್ಬರ - ರೇಷ್ಮೆ ಕೃಷಿಕರಿಗೊಂದು ವರದಾನ

ಪಿ. ಸರಸ್ವತಿ, ಎಸ್. ಬಿ. ಮುಗದಂ,
ಆಶಿಷ್ ಘೋಷ್ ಮತ್ತು ಸಿ.ಕೆ. ಕಾಂಬಳೆ

ರೈತನ ಮಿತ್ರ ಎಂದೇ ಹೆಸರಾಗಿರುವ ಎರೆಹುಳು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿಯ ತ್ಯಾಜ್ಯಗಳನ್ನೇ ಆಹಾರವಾಗಿ ಬಳಸಿಕೊಂಡು ಬೆಳೆವ ಎರೆಹುಳು ಸಾಕಾಣಿಕೆಗೆ ರೇಷ್ಮೆ ಕೃಷಿ ಬಹು ಸೂಕ್ತ. ಏಕೆಂದರೆ ಇತರೆ ಎಲ್ಲಾ ಕೃಷಿಗಿಂತ ರೇಷ್ಮೆ ಕೃಷಿಯಲ್ಲಿ ಹೆಚ್ಚು ತ್ಯಾಜ್ಯ ವಸ್ತುಗಳು ರೈತನಿಗೆ ಸಿಗುತ್ತವೆ. ಎರೆಹುಳುವು ಕಡಿಮೆ ಅವಧಿಯಲ್ಲಿ ಸಾವಯವ ಕಚ್ಚಾ ವಸ್ತುಗಳನ್ನು ಉತ್ತಮ ಗುಣಮಟ್ಟದ ಗೊಬ್ಬರವನ್ನಾಗಿ ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿದೆ. ಬೆಂಗಳೂರಿನಲ್ಲಿರುವ 'ಪ್ರಾದೇಶಿಕ ರೇಷ್ಮೆ ಸಂಶೋಧನ ಕೇಂದ್ರ'ವು ರೇಷ್ಮೆ ಕೃಷಿಕರು ಹೇಗೆ ಸಮರ್ಪಕವಾಗಿ ಎರೆಹುಳು ಸಾಕಾಣಿಕೆ ಮಾಡಿ, ಉತ್ತಮ ಎರೆಗೊಬ್ಬರ ಪಡೆಯಬಹುದೆಂಬುದನ್ನು ವಿವರಿಸಿದ್ದಾರೆ.

ಎರೆಹುಳು ಸಾಕಾಣಿಕೆಗೆ ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳು:

★ ಎರೆಹುಳು ವನಗಳನ್ನು ಎತ್ತರವಾದ ಪ್ರದೇಶದಲ್ಲಿ ನಿರ್ಮಿಸಿದರೆ ಒಳ್ಳೆಯದು.

★ ಮೇಲ್ಛಾವಣಿಯನ್ನು ಅನುಕೂಲಕರವಾದ ರೀತಿಯಲ್ಲಿ ಮಾಡಬಹುದು ಆದರೆ ಸುತ್ತಲೂ ತಂಪಾದ ವಾತಾವರಣ ಹಾಗೂ ಸೂರ್ಯನ ಕಿರಣಗಳು ಬೀಳದಂತೆ ಎಚ್ಚರ ವಹಿಸಬೇಕು.

★ ಎರೆಹುಳು ಕಾಲುವೆಗಳನ್ನು ಹಲ್ಲಿ, ಹೆಗ್ಗಣ, ಇಲಿ, ಇರುವೆ, ಮುಂತಾದ ಪ್ರಾಣಿಗಳಿಂದ ರಕ್ಷಿಸಬೇಕು. ಇರುವೆಗಳು ಕಾಲುವೆಗೆ ಹೋಗದಂತೆ ಸುತ್ತಲು ನೀರ್ಗಾಲುವೆಗಳನ್ನು ನಿರ್ಮಿಸಬೇಕು.

★ ಪಕ್ಷಿಗಳು ಎರೆಹುಳುಗಳನ್ನು ಹೆಕ್ಕಿ ತೆಗೆಯದಂತೆ ಸಣ್ಣ ತಂತಿಯಿಂದ ಜಾಲರಿಯನ್ನು ಮುಚ್ಚಬೇಕು.

★ ಕೀಟ ನಾಶಕಗಳು ಎರೆಹುಳು ಕಾಲುವೆಗಳಲ್ಲಿ ಬಾರದಂತೆ ಕ್ರಮ ತೆಗೆದುಕೊಳ್ಳಬೇಕು.

★ ಎರೆಹುಳು ಕಾಲುವೆಗಳಲ್ಲಿ ಹೆಚ್ಚು ನೀರು ನಿಲ್ಲದಂತೆ ನೋಡಿಕೊಳ್ಳಬೇಕು.

ಎರೆಹುಳು ಸಾಕುವ ವಿಧಾನ:

ಮಣ್ಣಿನ ನೆಲದಲ್ಲಿ ಕಾಲುವೆಗಳನ್ನು ಮಾಡಬೇಕು. ನಂತರ ಕಸ ಕಡ್ಡಿಗಳು, ರೇಷ್ಮೆ ಹುಳುವಿನ ಹಿಕ್ಕೆ, ಸೊಪ್ಪು, ಸಗಣಿ ಇತ್ಯಾದಿಗಳನ್ನು ಕಾಲುವೆಗಳಲ್ಲಿ ಹಾಕಬೇಕು. ನಂತರ ನೀರನ್ನು ಚಿಮುಕಿಸುತ್ತಿರಬೇಕು. ತ್ಯಾಜ್ಯ ವಸ್ತುಗಳನ್ನು ಹಾಕಿದ ಬಳಿಕ 12-15 ದಿನಗಳ ನಂತರ ಅಂದರೆ ವಸ್ತುಗಳೆಲ್ಲ ಅರ್ಧ ಕೊಳೆತು ಎರೆಹುಳು ತಿನ್ನಲು ಯೋಗ್ಯವಾಗಿರಬೇಕು. ಅಂತಹ ಸಮಯದಲ್ಲಿ ಕೊಳೆತ ವಸ್ತುಗಳನ್ನೆಲ್ಲ ಹೊರತೆಗೆದು ಟ್ರೆಂಚ್‌ಗಳಲ್ಲಿ ಹಾಕಬೇಕು. ಒಂದು ಟನ್ ಕಚ್ಚಾವಸ್ತುವಿಗೆ 1.5 ಕೆ.ಜಿ. ಎರೆಹುಳುವನ್ನು ಬಿಡಬೇಕು. ಟ್ರೆಂಚ್‌ಗಳ ಆಳ ಜಾಸ್ತಿ ಇರಬಾರದು. ಒಂದು ವೇಳೆ ಕೊಳೆತ ವಸ್ತುವಿನಲ್ಲಿ ಉಷ್ಣಾಂಶ ಜಾಸ್ತಿ ಇದ್ದರೆ, ಸಗಣಿಯನ್ನು (5 kg) 100 ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣವನ್ನು ಅದಕ್ಕೆ ಸೇರಿಸಬೇಕು. ಏಕೆಂದರೆ ಬ್ಯಾಕ್ಟೀರಿಯಗಳು 'ಎಕ್ಸೋಥರ್ಮಿಕ' ಕ್ರಿಯೆಯ ಮುಖಾಂತರ

ಅತ್ಯಧಿಕ ಉಷ್ಣಾಂಶ ಬಿಡುಗಡೆ ಮಾಡುತ್ತದೆ. ಇಷ್ಟು ಉಷ್ಣಾಂಶವನ್ನು ಎರೆಹುಳು ತಡೆಯುವುದಿಲ್ಲ.

ಎರೆಹುಳುವನ್ನು ಟ್ರೆಂಚ್‌ಗಳಲ್ಲಿ ಬಿಟ್ಟ ನಂತರ 2-3 ದಿನಗಳಿಗೊಮ್ಮೆ ನೀರು ಚಿಮುಕಿಸಬೇಕು ಹಾಗೂ ವಾರಕ್ಕೊಂದು ಬಾರಿ ಮೇಲೆ ಕೆಳಗೆ ಮಾಡಬೇಕು. ಈ ರೀತಿ ಮಾಡುವುದರಿಂದ ಎರೆಹುಳು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸುಲಭವಾಗಿ ಚಲಿಸಲು ಮತ್ತು ಉಸಿರಾಡಲು ಅನುಕೂಲವಾಗುತ್ತದೆ. ಅರ್ಧ ಕೊಳೆತ ವಸ್ತುವು 40-45 ಶೇಕಡವಾರು ತೇವಾಂಶ ಹೊಂದಿರುತ್ತದೆ. ನಂತರ 45-60 ದಿನಗಳವರೆಗೆ ಹಾಗೆ ಬಿಡಬೇಕು. ಈ ಅವಧಿ ಮುಗಿದ ನಂತರ ಎಲ್ಲಾ ಗೊಬ್ಬರವನ್ನು ಹೊರತೆಗೆದು ರಾಶಿ ಹಾಕಬೇಕು. ಎರೆಹುಳು ಎಲ್ಲಾ ವಸ್ತುಗಳನ್ನು ತಿಂದು ಜೀರ್ಣ ಮಾಡಿ ಹಿಕ್ಕೆಗಳನ್ನು ಉತ್ಪತ್ತಿ ಮಾಡಿರುತ್ತದೆ.

ಎರೆಹುಳು ಗೊಬ್ಬರದಲ್ಲಿ ಯಾವುದೇ ವಿಧವಾದ ದುರ್ಗಂಧ ಇರುವುದಿಲ್ಲ. ಹೆಚ್ಚಿನ ಪ್ರಮಾಣದ ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಇತರೆ ಲಘು ಪೋಷಕಾಂಶಗಳನ್ನು ಹೊಂದಿರುತ್ತದೆ.

ಎರೆಹುಳು ಗೊಬ್ಬರ ತಯಾರಿಕೆ ಅತ್ಯಂತ ಸರಳವಾದ ಕಡಿಮೆ ಖರ್ಚಿನಿಂದ ಎಲ್ಲಾ ಋತುಮಾನಗಳಲ್ಲಿ ತಯಾರಿಸಬಹುದಾದಂತಹ ಒಂದು ವಿಧಾನವಾಗಿದೆ.

ಒಣ ಬೇಸಾಯದಲ್ಲಿ ಬೀಜದೊಂದಿಗೆ ಎರೆಗೊಬ್ಬರ ಉಪಯೋಗಿಸಿದರೆ ಬಹಳ ಅನುಕೂಲ. ಒಂದು ಎಕರೆ ಹಿಪ್ಪುನೇರಳೆ ತೋಟದಲ್ಲಿ 4-5 ಟನ್‌ಗಳಷ್ಟು ತ್ಯಾಜ್ಯವಸ್ತುಗಳು ದೊರೆಯುತ್ತದೆ ಮತ್ತು ಅದರಲ್ಲಿ ಶೇಕಡ 75-80 ರಷ್ಟು ಎರೆಗೊಬ್ಬರ ಪಡೆಯಬಹುದಾಗಿದೆ.

ಎರೆಗೊಬ್ಬರದ ಉಪಯೋಗಗಳು

1. ಹೆಚ್ಚು ಇಳುವರಿ ಹಾಗೂ ಉತ್ತಮ ಆರೋಗ್ಯ.
2. ಹಿಪ್ಪುನೇರಳೆ ತೋಟಕ್ಕೆ ಎರೆಗೊಬ್ಬರ ಬಳಸಿದಾಗ ಹೆಚ್ಚಿನ ಗುಣಮಟ್ಟವಿರುವ ಸೊಪ್ಪು ಹಾಗೂ ಪ್ರಮಾಣ ದೊರೆಯುತ್ತದೆ.
3. ಭೂಮಿಯ ರಚನೆ ಸುಧಾರಿಸಿ ಭೂ ಸವಕಳಿಯನ್ನು ತಡೆಯುತ್ತದೆ.
4. ಭೂ ರಸಸಾರವನ್ನು ನಿರ್ಧಿಷ್ಟ ಮಟ್ಟದಲ್ಲಿ ಕಾಪಾಡುತ್ತದೆ.
5. ಹೆಚ್ಚಿನ ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಇತರೆ ಲಘು ಪೋಷಕಾಂಶಗಳನ್ನು ಹೊಂದಿರುತ್ತದೆ.
6. ಬೆಳೆಗಳಿಗೆ ರೋಗ ಹಾಗೂ ಕೀಟಗಳ ಬಾಧೆ ಕಡಿಮೆ.
7. ಯಾವುದೇ ಸಾವಯವ ವಸ್ತುಗಳನ್ನು ಆಹಾರ ರೂಪದಲ್ಲಿ ಬಳಸಿ ಉತ್ತಮ ಎರೆಗೊಬ್ಬರವನ್ನು ಭೂಮಿಗೆ ಸೇರಿಸುತ್ತದೆ.
8. ವರ್ಷದ ಎಲ್ಲಾ ಋತುಮಾನದಲ್ಲೂ ರೈತ ತನ್ನ ತೋಟದ ಪರಿಮಿತಿಯಲ್ಲೇ ತಯಾರಿಸಿ ಕೊಳ್ಳಬಹುದು.

'ನಿಜವಾದ ಸ್ವಾತಂತ್ರ್ಯಕ್ಕಾಗಿ ಚಳುವಳಿ' ದೆಹಲಿಯ ಮಹಾಧಿವೇಶ

ಜಾಗತೀಕರಣ ಮತ್ತು ಭೌದ್ಧಿಕ ಸನ್ನಹದು ಹಕ್ಕಿನ ಪರಿಣಾಮವಾಗಿ ನಮ್ಮ ದೇಶದ ಬಡ ಜನರು, ತಮ್ಮದಾಗಿದ್ದ ಭೂಮಿ, ನೀರು ಮತ್ತು ಅಪಾರ ಜೀವ ವಿವಿಧತೆಯನ್ನು ಕಳೆದುಕೊಳ್ಳುವಂತಾಗಿದೆ. ನೀರಿನ ಖಾಸಗೀಕರಣ, ಕೃಷಿ ನೀತಿಯ ಉದಾರೀಕರಣ ಮತ್ತು ಹಳ್ಳಿ ಜನರ ಹಾಗು ಕಾಡಿನ ಬುಡಕಟ್ಟು ಜನಾಂಗಗಳ ಭೂಮಿಯನ್ನು ಕಿತ್ತುಕೊಳ್ಳುವುದು. ಮಾನವ ಮತ್ತು ಸಂಪನ್ಮೂಲಗಳ ರಕ್ಷಣೆಗೆ ಬದ್ಧವಾಗಿರುವ ಸಂವಿಧಾನವನ್ನು ಉಲ್ಲಂಘಿಸುತ್ತಿರುವ ಕ್ರಮಗಳಾಗಿವೆ.

ಇಂತಹ ಸಮಯದಲ್ಲಿ ಖ್ಯಾತ ಪರಿಸರವಾದಿ ಡಾಃ ವಂಧನಾಶಿವರ 'ನವಧಾನ್ಯ' ಸಂಸ್ಥೆಯು ಮೂರು ದಿನಗಳ "ಭೂಮಂಡಲದ ಪ್ರಜಾಪ್ರಭುತ್ವ" (Earth Democracy) ಎಂಬ ಒಂದು ಸಮ್ಮೇಳನವನ್ನು ಏರ್ಪಡಿಸಿತ್ತು. ಈ ಸಮ್ಮೇಳನದಲ್ಲಿ ಜೀವ ವಿವಿಧತೆಯ ಬಗ್ಗೆ, ಅದರ ಸಂರಕ್ಷಣೆಯ ಬಗ್ಗೆ ಮತ್ತು ಬಡ ಜನರ, ಬುಡಕಟ್ಟು ಜನಾಂಗಗಳ ಹಿತಾಸಕ್ತಿಯಲ್ಲಿ ಕಾಳಜಿ ಹೊಂದಿರುವಂತಹ ಸುಮಾರು 300ಕ್ಕೂ ಹೆಚ್ಚು ತಳಮಟ್ಟದ ಜನಾಂಗಗಳ ಪ್ರತಿನಿಧಿಗಳು, ಲೇಖಕರು, ವಿಜ್ಞಾನಿಗಳು ಮತ್ತು ಪರಿಸರವಾದಿಗಳು ದೆಹಲಿಯಲ್ಲಿರುವ ಭಾರತೀಯ ಸಮಾಜ ಶಾಸ್ತ್ರ ಸಂಸ್ಥೆಯಲ್ಲಿ ಹಾಜರಿದ್ದರು. ಭೂಮಿ, ಜಲ ಮತ್ತು ಜೀವ ವಿವಿಧತೆಯ ಮೇಲೆ ನಡೆಯುತ್ತಿರುವ ಧೋರಣೆಗೆ ಸಾಕ್ಷ್ಯಾಧಾರ ಒದಗಿಸುವುದು ಮತ್ತು ಸಂಪನ್ಮೂಲ ಹಕ್ಕಿನ ರಕ್ಷಣೆಗಾಗಿ ಸಾಮೂಹಿಕ ಪ್ರಯತ್ನಕ್ಕೆ ಪೂರಕವಾಗಿ ಕಾರ್ಯ ನೀತಿಯನ್ನು ರೂಪಿಸುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿತ್ತು.

ಪ್ರತಿಷ್ಠಿತ ಮ್ಯಾಗ್ಸೆಸ್ ಪ್ರಶಸ್ತಿ ಪಡೆದಿರುವ ಮಹಶ್ವೇತ ದೇವಿ, ಬೂಕರ್ ಪ್ರಶಸ್ತಿ ಪಡೆದಿರುವ ಅರುಂಧತಿ ರಾಯ್ ಮುಂತಾದ ಅನೇಕ ಪ್ರತಿಷ್ಠಿತ ಪರಿಸರಾಸಕ್ತರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ನಮ್ಮ ಹಿತ್ತಲಗಿಡದ ಸಂಪಾದಕರಾದ ಡಾ. ಟಿ.ಎನ್. ಪ್ರಕಾಶ್‌ರವರು ಭಾಗವಹಿಸಿ ಪುಷ್ಪೋದ್ಯಮದಂತಹ ಆಧುನಿಕ ಕಾರ್ಪೋರೇಟ್ ಕೃಷಿ ನಮ್ಮ ಪರಿಸರ ಮತ್ತು ಭೂ ಸಂಬಂಧಗಳ ಮೇಲೆ ಹೇಗೆ ದುಷ್ಪರಿಣಾಮ ಬೀರಲಿವೆ ಎಂಬ ವಿಚಾರದ ಮೇಲೆ ಪ್ರಬಂಧ ಮಂಡಿಸಿದರು.

ಈ ಸಮ್ಮೇಳನದಲ್ಲಿ ನೈಸರ್ಗಿಕ ಸಂಪನ್ಮೂಲಗಳು, ಬುಡಕಟ್ಟು ಜನಾಂಗಗಳು ಮತ್ತು ಬಡವರ ಮೇಲೆ ದೇಶದ ಎಲ್ಲೆಡೆ ನಡೆಯುತ್ತಿರುವ ನಿರಂತರ ಶೋಷಣೆಯ ಬಗ್ಗೆ ಅನೇಕಾನೇಕ ಉದಾಹರಣೆಗಳ ಸಮೇತ ವಸ್ತುನಿಷ್ಠವಾಗಿ ವಿವರಿಸಲಾಯಿತು. ಅಂತೆಯೇ ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗು ಅನುಸರಿಸಬೇಕಾಗಿರುವ ಮಾರ್ಗಗಳ ಬಗ್ಗೆ ಚರ್ಚಿಸಲಾಯಿತು.

ಪ್ರತಿಕ್ರಿಯೆ

ಹೊಸ ವರ್ಷದ "ಹಿತ್ತಲಗಿಡ" ದಿನಾಂಕ 19.06.2002ರಂದು ತಲುಪಿತು. ಸೊಪ್ಪು ಕತ್ತರಿಸುವ ಕತ್ತರಿ ನಮ್ಮಲ್ಲಿ ಬಹಳ ಕಾಲದಿಂದ ಸುಮಾರು 1975ರಿಂದ ಬಳಕೆಯಲ್ಲಿರುವುದು ನನಗೆ ನೆನಪಿದೆ. ಈಗಲೂ ನಮ್ಮ ಊರಿನಲ್ಲಿ ಅಂತಹ ಸೊಪ್ಪುಗತ್ತರಿ ಇದೆ. ರಾಸಾಯನಿಕ ಔಷಧಿಗಳಿಲ್ಲದೆ ಆರೋಗ್ಯ ವೃದ್ಧಿಸಿಕೊಳ್ಳಲು ಕಾಸ್ಮಿಕ್ ಹೀಲಿಂಗ್, ಪ್ರಾಣಿಕ್ ಹೀಲಿಂಗ್, ರೇಖಿ ಹಾಗೂ ಯೋಗ ಇವೇ ಮುಂತಾದವುಗಳು ನಿಸರ್ಗ ದತ್ತ ಚಿಕಿತ್ಸೆಗಳು ಇವು ಯಾವ ಕಾಲೇಜಿನಿಂದ ಸೃಷ್ಟಿಯಾದ ಚಿಕಿತ್ಸೆಗಳಲ್ಲ, ಜೊತೆಗೆ ಆಹಾರದ ನೈಸರ್ಗಿಕ ಶಕ್ತಿಯನ್ನು ಹಾಳು ಮಾಡದಂತೆ ಉಪಯೋಗಿಸುವ ಬಗೆಗಳನ್ನು ತಿಳಿಸಿ ಎಂದು ಶ್ರೀ ಚೆನ್ನ ಬಸವರೆಡ್ಡಿ ಪಾಟೀಲ, ಹೆಬ್ಬೇರಾಳ, ಶಿವ ಪ್ರಿಂಟರ್ಸ್, ಗಂಜ ರಸ್ತೆ, ರಾಯಚೂರು ಇವರು ಕೇಳಿದ್ದಾರೆ.

ರಾಷ್ಟ್ರೀಯ ಕೃಷಿ ಯಂತ್ರೋಪಕರಣಗಳ ವಸ್ತು ಪ್ರದರ್ಶನ

ಕರ್ನಾಟಕ ರಾಜ್ಯ ಕೃಷಿ ವಿಭಾಗ ಮತ್ತು ಕೃಷಿ ತಂತ್ರಜ್ಞರ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಮೇ 2ರಿಂದ ಮೇ 5 ರವರೆಗೆ ರಾಷ್ಟ್ರೀಯ ಯಂತ್ರೋಪಕರಣಗಳ ವಸ್ತು ಪ್ರದರ್ಶನವನ್ನು, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಭವನದ ಆವರಣದಲ್ಲಿ ಏರ್ಪಡಿಸಲಾಗಿತ್ತು. ಈ ಪ್ರದರ್ಶನದಲ್ಲಿ ಹಿತ್ತಲ ಗಿಡ ಬಳಗದ ಸಹಯೋಗದಲ್ಲಿ ರಾಷ್ಟ್ರೀಯ ಅನುಶೋಧಕರ ಪ್ರತಿಷ್ಠಾನವು ಸಹ ಪ್ರಾಯೋಜಕರಾಗಿ ಭಾಗವಹಿಸಿತ್ತು.

ಈ ವಸ್ತುಪ್ರದರ್ಶನವು ವಿಧ ವಿಧದ ಅಗತ್ಯ ಕೃಷಿ ಯಂತ್ರೋಪಕರಣಗಳ ಪರಿಚಯ ಮತ್ತು ಮಾರಾಟಕ್ಕೆ ಒಂದು ಉತ್ತಮ ವೇದಿಕೆಯನ್ನು ಕಲ್ಪಿಸಿತ್ತು. ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಅನೇಕ ಅನುಶೋಧನೆಗಳಿಗೆ ಉತ್ತಮ ಬೇಡಿಕೆ ಬಂದಿರುತ್ತದೆ. ಅಣ್ಣಾಸಾಹೇಬ ಉದ್ಗಾವೆಯವರು 150 ಚಂದ್ರ ಪ್ರಭಾ ನೀರುಗನ್ನಿಗೆ, ನರಸಿಂಹ ಭಂಡಾರಿಯ ಒಂದು ಅಡಿಕೆ ಒಣಗಿಸುವ ಯಂತ್ರಕ್ಕೆ, ಬೆಮೆಲ್ ಪ್ರಕಾಶ್‌ರ 15 ಕಡಿಮೆ ವೆಚ್ಚದ ಒಲೆಗೆ ಮತ್ತು ರತ್ನಾಕರ್‌ರ 22 ಟರ್ಬೋಗಳಿಗೆ ಜನರು ಮುಂಗಡ ಹಣ ಪಾವತಿ ಮಾಡಲು ಮುಂದೆ ಬಂದಿರುವರು ಇದು ರೈತ ಮೂಲದ ಅನುಶೋಧನೆಗಳ ಉಪಯುಕ್ತತೆಯನ್ನು ಪ್ರತಿಬಿಂಬಿಸಿರುತ್ತದೆ.

ಅಳಲೇಕಾಯಿ

ರಾಷ್ಟ್ರೀಯ ಗೋ ಆಯೋಗ (National Commission on Cattle) ದೇಶದಲ್ಲಿ ಗೋಶಾಲೆಗಳ ಪುನರುಜ್ಜೀವನದ ಬಗ್ಗೆ ವರದಿ ಸಲ್ಲಿಸಿದ್ದು ಇದರಲ್ಲಿ ಗೋಮೂತ್ರದಲ್ಲಿರುವ ಔಷಧಿ ಗುಣಗಳ ಬಗ್ಗೆ ಹೆಚ್ಚು ಒತ್ತು ನೀಡಿರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಈಗ ಕಾರ್ಯದಲ್ಲಿರುವ ಹಲವಾರು ಗೋಶಾಲೆಗಳಿಗೆ ಬರುವ ಆದಾಯದಲ್ಲಿ ಬಹುಪಾಲು ಹಾಲಿನ ಮಾರಾಟದಿಂದಲ್ಲ ಬದಲಿಗೆ ಗೋಮೂತ್ರದ ಮಾರಾಟದಿಂದ ಅದೂ ಔಷಧಿಯಾಗಿ ಬಳಸುವ ಉದ್ದೇಶದಿಂದ ಬರುತ್ತಿದೆಯಂತೆ! ಗೋಮೂತ್ರಸೇವನೆಯಿಂದ ಹೃದಯ ಕಾಯಿಲೆ ಅಷ್ಟೇಕೆ ಅರ್ಬುದ ರೋಗಗಳಿಗೂ ಉಪಶಮನ ಕಂಡುಕೊಂಡಿರುವ ಉದಾಹರಣೆಗಳಿವೆಯಂತೆ. ಈ ನಿಟ್ಟಿನಲ್ಲಿ ಒಂದು ಸಮಗ್ರವಾದ ವೈಜ್ಞಾನಿಕ ಸಂಶೋಧನೆಯಾದಲ್ಲಿ ಗೋಶಾಲೆಗಳ ಪುನರುಜ್ಜೀವನ ಮಾತ್ರವಲ್ಲ ಸಾಮಾನ್ಯರಿಗೆ ಅತ್ಯಂತ ಪರಿಣಾಮಕಾರಿಯಾದ ಔಷಧಿಗಳೂ ಲಭ್ಯವಾಗಲಿದೆ.

ಪಾರಂಪರಿಕ ಜಲನಿಧಿಗಳ ಪುನರುಜ್ಜೀವನದ ಬಗೆಗಿನ ಶಿಬಿರ

ದಕ್ಷಿಣ ಕನ್ನಡದ ಬದಿಯಡ್ಕದಲ್ಲಿ ಮಾರ್ಚ್ 23ರಂದು ಜರುಗಿದ ಈ ಶಿಬಿರದಲ್ಲಿ ಪಾರಂಪರಿಕ ಜಲ ಮರುಪೂರಣದ ಆಕಾರಗಳಾದ ಮದಗ, ಕಟ್ಟಗಳ ಮಹತ್ವ, ತಾತ್ಕಾಲಿಕ ಕಟ್ಟಗಳ ವಿನ್ಯಾಸ ಸುಧಾರಣೆ, ವೆಚ್ಚಕಡಿತ ವಿಧಾನಗಳು, ಕಿರು ತೊರೆ, ಮಳೆಗಾಲದ ತೊರೆಗಳ ನೀರಿನ ಸದುಪಯೋಗ ಮುಂತಾದುವುಗಳ ಕುರಿತು ಚಿಂತನ-ಮಂಥನ ಜರುಗಿತು. ಶಿಬಿರದಲ್ಲಿ ನೂರಕ್ಕೂ ಹೆಚ್ಚು ಈ ಕುರಿತ ಛಾಯಾ ಚಿತ್ರಗಳು ಪ್ರದರ್ಶನಗೊಂಡವು. ಶಿಬಿರದ ಮುಂಚಿನ ದಿನ ಏತಡ್ಕ, ನಾರಂಪಾಡಿ, ಮುಕಾರಿಗದ್ದೆ ಮುಂತಾದ ಕಡೆ ಕಟ್ಟ ಮತ್ತು ಮದಗಗಳಿರುವ ಸ್ಥಳ ದರ್ಶನ-ಜಲಯಾತ್ರೆಯನ್ನು ಕೈಗೊಳ್ಳಲಾಗಿತ್ತು.

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಪೂರ್ವ ಸೂಚಿತ ಸಮ್ಮತಿ ಪತ್ರ

(Prior Informed Consent Form)

ಮುಕ್ತ ಚರ್ಚೆಗಾಗಿ ಕರಡು ಪ್ರತಿ

ಹನೀಬೀ ಬಳಗ

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಮಟ್ಟದ ಸ್ಪರ್ಧೆಯ ಸ್ಪರ್ಧಾರ್ಥಿಗಳು

ಆತ್ಮೀಯ ಶೋಧಕರೇ/ಸಂಪ್ರದಾಯಿಕ ಜ್ಞಾನದ ಪ್ರವೀಣರೇ,

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನವು ಮಾರ್ಚ್ 2000 ದಲ್ಲಿ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಿಂದ ಸ್ಥಾಪಿಸಲ್ಪಟ್ಟಿದ್ದು ಸಮಾಜದಿಂದ ಕಡೆಗಣಿಸಲ್ಪಟ್ಟ ತಳಮಟ್ಟದ ಸಂಶೋಧನೆಗಳನ್ನು/ಸಂಶೋಧಕರನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಇದರ ಮೂಲ ಉದ್ದೇಶವಾಗಿದೆ. ಈ ಮೂಲಕ ಜ್ಞಾನದ ಸವಕಳಿಯನ್ನು ತಡೆಗಟ್ಟಿ ತಳಮಟ್ಟದ ಸಂಶೋಧಕರಿಗೆ ಸಾಮಾಜಿಕ ಪ್ರಾಮುಖ್ಯತೆಯನ್ನು ಒದಗಿಸಿ, ಭಾರತವನ್ನು ನಿರಂತರ ಅನುಶೋಧಕ ಸಮಾಜವನ್ನಾಗಿಸುವುದು ಇದರ ಮೂಲ ಧ್ಯೇಯವಾಗಿದೆ. ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನವು ಪ್ರಚಾರ ಮತ್ತು ಸನ್ಮಾನಗಳ ಮೂಲಕ ತಳಮಟ್ಟದ ಶೋಧಕರನ್ನು ಗುರುತಿಸಿ ರೈತರು, ಮಹಿಳೆಯರು, ಬುಡಕಟ್ಟು ಜನಾಂಗಗಳು, ನಾಟೀ ಸಮುದಾಯಗಳು, ಕರಕುಶಲ ಕರ್ಮಿಗಳು ಮುಂತಾದವರನ್ನು ಈ ನಿಟ್ಟಿನಲ್ಲಿ ಪ್ರೋತ್ಸಾಹಿಸುತ್ತದೆ. 2000 ಇಸವಿಯಲ್ಲಿ ಮೊದಲ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಈ ಪ್ರತಿಷ್ಠಾನವು 998 ಪ್ರವೇಶಗಳನ್ನು ಸ್ವೀಕರಿಸಿದ್ದು ಆ ಮೂಲಕ 1660 ಅನುಶೋಧನೆಗಳನ್ನು ಮತ್ತು ಅಸಾಧಾರಣ ಸಾಂಪ್ರದಾಯಿಕ ಜ್ಞಾನ ಪ್ರಕಾರಗಳನ್ನು ಗುರುತಿಸಿ ರಾಷ್ಟ್ರೀಯ ದಾಖಲಾತಿ ಪಟ್ಟಿಯಲ್ಲಿ ಈಗಾಗಲೇ ಸೇರಿಸಲಾಗಿರುತ್ತದೆ. ಅವುಗಳಲ್ಲಿ 87ಕ್ಕೆ ಅಸಾಧಾರಣ ಅನುಶೋಧನೆಗಳೆಂದು ಪ್ರಶಸ್ತಿ ನೀಡಲಾಗಿರುತ್ತದೆ. ಇದಕ್ಕೆ ಮೌಲ್ಯ ಕ್ರೂಢೀಕರಣ ಮಾಡಿ ಆ ಮೂಲಕ ಶೋಧಕರಿಗೂ ಮತ್ತು ಇಡೀ ಸಮಾಜಕ್ಕೂ ಒಳಿತು ತರುವಂತೆ ಮಾಡಲು ಈ ಪ್ರತಿಷ್ಠಾನ ಪ್ರಯತ್ನಿಸುತ್ತಿದೆ. ತಾವು ಕಂಡು ಹಿಡಿದಿರುವ ಹಾಗೂ ನಮ್ಮೊಡನೆ ಸ್ಪರ್ಧೆಗೆ ಹಂಚಿಕೊಂಡಿರುವಂತಹ ಅನುಶೋಧನೆ ಅಥವಾ ಪಾರಂಪರಿಕ ಜ್ಞಾನವನ್ನು ಯಾವ ರೀತಿ ಬಳಕೆ ಮಾಡಬಹುದೆಂದು ತಿಳಿಸಲು ತಮ್ಮ ಲಿಖಿತ ಒಪ್ಪಿಗೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೆಳಗಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿಮ್ಮ ಶೋಧನೆಗೆ ಹೊಂದುವಂತಹ ಒಂದು ಅಥವ ಹೆಚ್ಚು ಉತ್ತರಕ್ಕೆ ಗೆರೆ ಹಾಕಿರಿ.

ನಿಮ್ಮ ಶೋಧನೆಯ ಹೆಸರು:

ನಿಮ್ಮ ಸಂಶೋಧನೆ /ಯೋಚನೆಯ ವಿಷಯದ ಬಗ್ಗೆ ಹೌದು ಇಲ್ಲ

ಅ. ಆಸಕ್ತರೊಂದಿಗೆ ನಿಮ್ಮ ವಿಳಾಸ ಹಂಚಿಕೊಳ್ಳುವಿರಾ ?

ಆ. ನನ್ನ ಶೋಧನೆ / ಯೋಚನೆ /ತಂತ್ರಜ್ಞಾನವನ್ನು ಇತರರು ಓದಲು ವೆಬ್‌ನಲ್ಲಿ ಹಾಕಬಹುದೆ?

ಇ. ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನವು ನನ್ನ ಶೋಧನೆ/ಯೋಚನೆಯನ್ನು ಇತರರೊಂದಿಗೆ ಹಂಚಿಕೊಳ್ಳುವುದಾದಲ್ಲಿ

1. ಅದಕ್ಕೆ ಯಾವುದೇ ಕಟ್ಟಳೆ ವಿಧಿಸುವುದಿಲ್ಲ
2. ಅದನ್ನು ವಾಣಿಜ್ಯ ಉದ್ದೇಶಕ್ಕೆ ಮಾತ್ರ ಬಳಸಲು ಒಪ್ಪುತ್ತೇನೆ.
3. ಸಾಮಾನ್ಯರು ಬಳಸಿದಲ್ಲಿ ಅದಕ್ಕೆ ಬೆಲೆ ಕೊಡಬೇಕಾಗಿಲ್ಲ, ಆದರೆ ದೊಡ್ಡ ವಾಣಿಜ್ಯ ಉದ್ದೇಶಗಳಿಗೆ ಬಳಸಿದರೆ ಬೆಲೆ ನೀಡಬೇಕು
4. ಹೆಚ್ಚಿನ ಸಂಶೋಧನೆಗೆ ಬಳಸಬಹುದು
5. ಮತ್ತೆ ಏನಾದರೂ ಇದ್ದರೆ ದಯವಿಟ್ಟು ತಿಳಿಸಿರಿ ....

....

ಈ. ನಾನು ತಂತ್ರಜ್ಞಾನವನ್ನು ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನಕ್ಕೆ ನನ್ನ ಪರವಾಗಿ ತಂತ್ರಜ್ಞಾನ ವರ್ಗಾವಣೆಗೆ ಅನುಮತಿ ನೀಡುತ್ತೇನೆ

ಹೌದು ಎಂದಾದರೆ, ಲಾಭಾಂಶವನ್ನು ಕೆಳಗಿನ ಅನುಪಾತದಲ್ಲಿ ವಿವಿಧ ಪಾಲುದಾರರೊಂದಿಗೆ ಹಂಚಿಕೊಳ್ಳಲು ಒಪ್ಪುವಿರಾ:

ಅನುಶೋಧಕರು ಶೇ. 35, ಶೋಧಕರ ಸಮುದಾಯ / ಹಳ್ಳಿಗೆ ಶೇ. 15, ಶೋಧನೆಯನ್ನು ಪ್ರೋತ್ಸಾಹಿಸುವ ನಿಧಿಗೆ ಶೇ. 20, ಶೋಧನೆಗೆ ಮೌಲ್ಯವರ್ಧನೆ ಮಾಡಬಹುದಾದ ಸಂಶೋಧಕರಿಗೆ ಶೇ. 15 ಮತ್ತು ಸಾಂಸ್ಥಿಕ ನಿರ್ವಹಣೆ ವೆಚ್ಚಕ್ಕೆ ಶೇ.15.
ನೀವು ಇದಕ್ಕೆ ಪರ್ಯಾಯ ಲಾಭ ಹಂಚಿಕೆ ಪದ್ಧತಿಯನ್ನು ನೀಡಬಯಸಿದರೆ ಅದರ ವಿವರ ನೀಡಿ:

ಶೋಧಕರು	
ಸಮುದಾಯ / ಹಳ್ಳಿ	
ಶೋಧನೆಯನ್ನು ಪ್ರೋತ್ಸಾಹಿಸುವ ನಿಧಿ	
ಸಂಶೋಧಕರು / ಮೌಲ್ಯ ವರ್ಧಕರು	
ಸಾಂಸ್ಥಿಕ ನಿರ್ವಹಣಾ ವೆಚ್ಚ	

ಉ) ಅಥವಾ ತಂತ್ರಜ್ಞಾನದ ವರ್ಗಾವಣೆಯನ್ನು ನಾನೇ ಸ್ವತ: ಮಾಡುತ್ತೇನೆ

ಶೋಧಕರ ಹೆಸರು:

ಸಹಿ

ಅಂಚೆ ವಿಳಾಸ:

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)
ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ
ರಾಷ್ಟ್ರೀಯ ಮಟ್ಟದ ತೃತೀಯ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು–ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 5,000ದ ಐನೂರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ತರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ತೃತೀಯ ವಾರ್ಷಿಕ ಸ್ಪರ್ಧೆಗೆ ಪ್ರವೇಶ ಕಳುಹಿಸಲು ಫೆಬ್ರವರಿ 28, 2003ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Concent) ಪಡೆದ ನಂತರವೇ ಮುಂದುವರೆಯಲಾಗುವುದು (ಇದರ ಕರಡು ಪ್ರತಿಯನ್ನು ಪುಟ 12 ರಲ್ಲಿ ಮುದ್ರಿಸಲಾಗಿದೆ).

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:
National Co-ordinator, National Innovation Foundation, Satellite complex, Bangalow No.1, Premchand Nagar Road,
Ahmedabad - 380 015, Gujarat, e-main: campaign@nifindia. org

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು–೫೬೦೦೬೫
ದೂರವಾಣಿ: 362 0025, email: prakashtnk@yahoo.com

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)
ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು
ಕರ್ನಾಟಕದಿಂದ - ಹಿತ್ತಲಗಿಡ ಬಳಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, Honey Bee Network, Indian Institute of Management, Ahmedabad

ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3620025, 8560267(R)
email: hittalu@bgl.vsnl.net.in and prakashtnk@yahoo.com

ಗೆ, ...
....
....
....

Printed by Sri. S. Sridhar, Published by Smt. K. Meenakshi (Owner). Printed at "Navbharath Enterprises" No.10, Sirur Park `B' Street, ÍSheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi